೪-೦೦ ಪಿ.ಎಂ.

ವಿತ್ತೀಯ ಕಾರ್ಯಕಲಾಪಗಳು

1989-90ನೇ ಸಾಲಿನ ಅನಂಪೂರಕ ಅನುದಾನ ಬೇಡಿಕೆಗಳ ಬಗ್ಗೆ ಚರ್ಚೆ

† ಶ್ರೀ ಪಿ.ಜಿ ಆರ್. ಸಿಂಧ್ಯ(ಕನಕಪುರ).—ಮಾನ್ಯ ಅಧ್ಯಕ್ಷರೇ, ಸಾಮಾನ್ಯವಾಗಿ ಯಾವುದೇ ಒಂದು ಸರ್ಕಾರ ತನ್ನ ಬಜೆಟನ್ನು ಈ ಸದನದ ಒಪ್ಪಿಗೆಗೋಸ್ಕರ ಮಂಡಿಸುತ್ತದೆ. ಅದಕ್ಕೆ ಒಪ್ಪಿಗೆ ತೆಗೆದುಕೊಂಡ ಮೇಲೆ ಆ ವರ್ಷದಲ್ಲಿ ಹಣವನ್ನು ಹೆಚ್ಚಿಗೆ ಖರ್ಚು ಮಾಡತಕ್ಕಂಥಾದ್ದು ನಮ್ಮ ಸರ್ಕಾರದಲ್ಲೂ ಇತ್ತು, ಹಿಂದಿನ ಸರ್ಕಾರಗಳಲ್ಲೂ ಇತ್ತು. ಅದು ಸ್ವಾಭಾವಿಕವಾಗಿ ಇರತಕ್ಕಂಥಾದ್ದು ತಮಗೆ ಗೊತ್ತಿದೆ. ಹಿಂದೆ ಚುನಾಯಿತ ಸರ್ಕಾರ ನಮ್ಮ ರಾಜ್ಯದಲ್ಲಿ ಇರಲಿಲ್ಲ. ಚುನಾಯಿತ ಸರ್ಕಾರ ಇಲ್ಲದೇ ಇರತಕ್ಕಂಥ ಸಂದರ್ಭದಲ್ಲಿ ನಮ್ಮ ರಾಜ್ಯದಲ್ಲಿ ರಾಷ್ಟ್ರಪತಿಗಳ ಆಡಳಿತ ಇತ್ತು. ಆಗ ರಾಜ್ಯಪಾಲರು ಸರ್ಕಾರದ ಮಂತ್ರಿಮಂಡಲವನ್ನು ಮತ್ತು ಮುಖ್ಯಮಂತ್ರಿಗಳನ್ನು ಪ್ರತಿನಿಧಿಸುತ್ತಾ ಇದ್ದರು, ಮಾನ್ಯ ರಾಜ್ಯಪಾಲರನ್ನು ನಾನು ನೇರವಾಗಿ ಟೀಕೆ ಮಾಡಲಿಕ್ಕೆ ಬಯಸುವುದಿಲ್ಲ. ಅವರ ಕಾರ್ಯವನ್ನು ಸಹಿತ ನಾನು ಟೀಕೆ ಮಾಡಲಿಕ್ಕೆ ಬಯಸುವುದಿಲ್ಲ. ಆದರೆ ರಾಜ್ಯಪಾಲರು ತೆಗೆದುಕೊಂಡಂಥ ಕೆಲವು ನಿರ್ಣಯಗಳು ಏನಿವೆ, ಆ ನಿರ್ಣಯಗಳ ಬಗ್ಗೆ ನಾನಂ ಈ ಸಂದರ್ಭದಲ್ಲಿ ಒಂದೆರಡು ಮಾತುಗಳನ್ನು ಸರ್ಕಾರದ ಗಮನಕ್ಕೆ ತರಲಿಕ್ಕೆ ಇಚ್ಛಿಸಿದ್ದೇನೆ. ಆಗ ನಾವು ಆಡಳಿತ ಪಕ್ಷದಲ್ಲಿದ್ದೆವು: ನಮ್ಮ ಸರ್ಕಾರ ಹೋಯಿತಂ. ಆವೊತ್ತು ರಾಜ್ಯಪಾಲರ ಸ್ಥಾನದಲ್ಲಿ ಕುಳಿತುಕೊಂಡಂಥ ವ್ಯಕ್ತಿ ತಮಗೆ ಅನುಕೂಲವಾಗುತ್ತದೆ ಎನ್ನುವ ದೃಷ್ಟಿಯಿಂದಾಗಿ ನಮ್ಮ ಸರ್ಕಾರವನ್ನು ಕಿತ್ತು ಹಾಕಿದರು. ನಮಗೆ ಆ ಹೊಟ್ಟೆಯುರಿ ಇದೆ ಎನ್ನತಕ್ಕಂಥ ದೃಷ್ಟಿಯಿಂದಾಗಿ ನಾನು ಈ ಮಾತನ್ನು ಹೇಳಂತ್ತಾ ಇಲ್ಲ. ಆದರೆ ನಮ್ಮ ಸರ್ಕಾರವನ್ನು ತೆಗೆದಂಥ ಸಂದರ್ಭದಲ್ಲಿ ಇಡೀ ದೇಶದಲ್ಲಿ ಒಂದು ದೊಡ್ಡ ರಾಜಕೀಯ ವಾತಾವರಣ ಉಂಟಾಗಿ ನಮ್ಮ ಆಡಳಿತ ಪಕ್ಷದಲ್ಲಿ ಕುಳಿತುಕೊಂಡಿದ್ದಂಥ ಮಂಡಿಂಡರು, ಧುರೀಣರೂ ಆ ಸಂದರ್ಭದಲ್ಲಿ ಮಾತನಾಡಿದರು. ನಾವು ಆಡಳಿತವನ್ನು ನಡೆಸಿದಂಥ ೪-೫ ವರ್ಷಗಳ ಕಾಲದಲ್ಲಿ ಸರ್ಕಾರದ ಬೊಕ್ಕಸವನ್ನು ಖಾಲಿ ಮಾಡಿದ್ದಾರೆ, ಒಂದು ಪೈಸೆ ಹಣ ಇಲ್ಲ, ಇದನ್ನೆಲ್ಲಾ ನಾವು ಒಂದು ವರ್ಷದಲ್ಲಿ ಸರಿ ಮಾಡುತ್ತೇವೆ ಎನ್ನತಕ್ಕ ಮಾತನ್ನು ಆವತ್ತು ಆಡಳಿತ ಪಕ್ಷದಲ್ಲಿದಂಥ ಮಿತ್ರರೂ ಸಹಿತ ಪ್ರಸ್ತಾಪನಾಡಿದರು, ದುರದೃಷ್ಟವಶಾತ್ ರಾಜ್ಯಪಾಲರ ಸ್ಥಾನದಲ್ಲಿ ಕುಳಿತುಕೊಂಡಂಥ ವ್ಯಕ್ತಿಗಳೂ ಸಹಿತ ಆ ಮಾತನ್ನು ಹೇಳಿದರು. ಆಗ ಕೇಂದ್ರದಲ್ಲೂ ಸಹಿತ ಆವತ್ತು ನಮ್ಮ ರಾಜ್ಯವನ್ನು ಆಳುತ್ತಾ ಇರತಕ್ಕಂಥ ಪಕ್ಷದ ಸರ್ಕಾರವಿತ್ತು, ನಾವೆಲ್ಲಾ ಭಾವಿಸಿಕೊಂಡಿದ್ದೆವು ಅಂದರೆ, ಕೇಂದ್ರದಿಂದ ಹಣ ಬರಬಹುದು ನಾವೇನೋ ತಪ್ಪು ಮಾಡಿಬಿಟ್ಟಿದ್ದೇವೇನೊ ಎನ್ನತಕ್ಕಂಥ ಭಾವನೆ ನಮಗೂ ಸಹಿತ ಒಂದು ಕಡೆ ಚುಚ್ಚುತ್ತಾ ಇತ್ತು. ಆದರೆ ಈಗ ಅನ್ನಿಸುತ್ತದೆ, ಕೇಂದ್ರ ಸರ್ಕಾರದಿಂದ ರಾಜ್ಯಪಾಲರ ಆಡಳಿತದ ಸಂದರ್ಭದಲ್ಲಿ ಒಂದು ಪೈಸೆ ಸಹಿತ ಹಣ ನಮ್ಮ ರಾಜ್ಯಕ್ಕೆ ಬಂದಿಲ್ಲ. ಮಾನ್ಯ ಹಣಕಾಸಿನ ಮಂತ್ರಿಗಳು ಉತ್ತರ ಕೊಡುವಾಗ ಹೇಳಿದರೆ ಬಹಳ ಚೆನ್ನಾಗಿರುತ್ತದೆ. ಒಂದು ಪೈಸೆ ಸಹಿತ ಕೇಂದ್ರ ಸರ್ಕಾರದಿಂದ ಬಂದಿಲ್ಲ. ಬಹುಶ: ನೆನಪಿನ್ನಿಸುತ್ತದೆ, ಯೂನಿಟ್ ಟ್ರಸ್ಟ್ ಆಫ್ ಇಂಡಿಯಾದವರು ಸ್ಮಾಲ್ ಸೇವಿಂಗ್ಸ್ ಬಾಬತ್ತು ೨೦೦ ಕೋಟಿ ತೆಗೆದುಕೊಂಡಿದ್ದಕ್ಕೆ ಒಂದು ೫೦ ಕೋಟಿ ನಮ್ಮ ರಾಜ್ಯ ಸರ್ಕಾರಕ್ಕೆ ಬಂದಿರಬಹುದೇ ವಿನ: ಬಾಕಿ ಯಾವ ದೃಷ್ಟಿಯಲ್ಲೂ ಸಹಿತ ನಮಗೆ ಹಣ ಬಂದಿಲ್ಲ. ಮಾನ್ಯ ಅಧ್ಯಕ್ಷರೇ, ಮತ್ತೊಂದು ಪ್ರಚಾರ ಆಯಿತು ಇವತ್ತಿಗೂ ಅದು ಆಗುತ್ತಾ ಇದೆ. ಇವತ್ತು ಬೆಳಿಗ್ಗೆ ಸದನದಲ್ಲಿ ಚರ್ಚೆ ಮಾಡುವಾಗಲೂ ಸಹಿತ ಸಾರಾಯಿ ಮತ್ತು ಮದ್ಯಪಾನದವರ ಜೇಬಿನಲ್ಲಿ ಅವರ ಸೂಟ್‌ಕೇಸ್‌ಗಳಲ್ಲಿ ನಾವು ಇದ್ದೇವೆ ಎಂದು ಅರ್ಥ ಬರತಕ್ಕಂಥ ಮಾತುಗಳೂ ಸಹಿತ ಕೇಳಿ ಬಂತಂ.

ಶ್ರೀ ಎಂ. ರಾಜಶೇಖರಮೂರ್ತಿ.—ನಾವು ಹೇಳಲಿಲ್ಲ.

ಶ್ರೀ ಪಿ.ಜಿ ಆರ್. ಸಿಂಧ್ಯ.—ತಾವು ಹೇಳಲಿಲ್ಲ, ಆ ರೀತಿ ಅರ್ಥ ಬಂತು. ಒಂದು ದಿವಸಕ್ಕೆ ೨ ಕೋಟಿ ಹಣವನ್ನು ನುಂಗಿ ಹಾಕುತ್ತಾ ಇದ್ದಾರೆ, ರಾಜ್ಯ ಸರ್ಕಾರದ ಹಣ ಸೋರಿ ಹೋಗುತ್ತಾ ಇದೆ, ಅದನ್ನೆಲ್ಲ ನಾವು ಸರಿ ಮಾಡುತ್ತಾ ಇದ್ದೇವೆ ಎನ್ನತಕ್ಕಂಥ ಪ್ರಚಾರ ಸಹಿತ ನಡೆಯಿತು. ಮಾನ್ಯ ಅಧ್ಯಕ್ಷರೇ, ನಮ್ಮ ಸರ್ಕಾರ ಹೋಗಿದ್ದು ಕಳೆದ ವಿಧಾನ್‌ಸಭೆಯಲ್ಲಿ. ಅಂದರೆ ಇಲ್ಲಿಗೆ ೧೧ ತಿಂಗಳು ಆಗಿದೆ. ೩೩೦ ದಿವಸಗಳಾಗಿದೆ, ಒಂದು ದಿನಕ್ಕೆ ೨ ಕೋಟಿ ರೂಪಾಯಿಗಳು ಆದರೆ ಸೋರಿ ಹೋಗುತ್ತಿರುವ ೭೫೦ ಕೋಟಿ ಹಣ ಎಲ್ಲಿ ? ಮಾನ್ಯ ಮುಖ್ಯಮಂತ್ರಿಗಳು ಒಂದು ಪ್ರಾಮಾಣಿಕವಾದ ಮಾತಂ ಹೇಳಿ ಇದನ್ನು ತಡೆಗಟ್ಟುವುದಕ್ಕೆ ನಾವು ಪ್ರಯತ್ನ ಮಾಡುತ್ತೇವೆಂದು ಹೇಳಿದ್ದಾರೆ. ನಾನು ಬಜೆಟ್‌ಮೇಲೆ

ಮಾತನಾಡುವಾಗ ಸಹ ಇದನ್ನು ಅರ್ಥ ಮಂತ್ರಿಗಳ ಗಮನಕ್ಕೆ ಇದನ್ನು ತಂದಿದ್ದೇನೆ. ತಾವು ಏನು ೭೧ ಕೋಟಿ ರೂಪಾಯಿ ಹಣವನ್ನು ಹೆಚ್ಚಿನ ಆದಾಯವೆಂದು ಬಜೆಟ್‌ನಲ್ಲಿ ನಿರೀಕ್ಷಣೆ ಮಾಡಿದ್ದೀರಾ, ಈ ಬಗ್ಗೆ ತಮ್ಮ ಪ್ರಯತ್ನವನ್ನು ಅಪ್ರಮಾಣಿಕವೆಂದು ಹೇಳುವುದಿಲ್ಲ. ಇದನ್ನು ವಸೂಲಿ ಮಾಡುವ ದಾರಿಯೂ ಸರಿಯಿಲ್ಲವೆಂದು ಹೇಳುವುದಿಲ್ಲ. ಆದರೆ ನಿರಾಸೆಯಂತೂ ಅಂತೂ ತಮಗೆ ಕಾದಿದೆ. ನಿರಾಸೆಯಾಗಬಾರದೆಂದು ನನ್ನ ಇಚ್ಛೆ. ನಮ್ಮ ರಾಜ್ಯ ಸರ್ಕಾರಕ್ಕೆ ಹಣ ಬರಲಿ, ಆದರೆ ಬರುವುದಿಲ್ಲ. ತಾವು ಮುಂದೆ ನೋಡುತ್ತೀರಿ. ರಾಜ್ಯಪಾಲರ ೩೫೦ ದಿವಸಗಳ ಆಡಳಿತದ ಅವಧಿಯಲ್ಲಿ ಪ್ರತಿದಿನ ೨ ಕೋಟಿ ರೂಪಾಯಿ ಹಣ ಸೋರಿ ಹೋಗುತ್ತಿತ್ತು. ಆಗ ಅಧಿಕಾರ ನಿಮ್ಮದೂ ಅಲ್ಲ, ನಮ್ಮದೂ ಅಲ್ಲ, ಏಕೆಂದರೆ ಆಗ ರಾಜ್ಯಪಾಲರ ಆಡಳಿತ ಇತ್ತು. ಅಧಿಕಾರಿಗಳೇ ಇದನ್ನೆಲ್ಲಾ ನಡೆಸುತ್ತಿದ್ದರು. ಆದರೂ ಏಕೆ ಹಣ ಬರಲಿಲ್ಲ ಎಲ್ಲಿ ಹೋಯಿತು ಇದನ್ನು ನಾವು ಕೇಳಬಹುದಲ್ಲ, ರಾಜ್ಯಪಾಲರ ಆಡಳಿತದಲ್ಲಿ ಇದೆಲ್ಲ ನಿಂತು ಹೋಗುತ್ತದೆ ಎಂದು ನಾನು ಅಂದುಕೊಂಡಿದ್ದೆ. ಸನಗೆ ಗೊತ್ತಿರುವ ಹಾಗೆ ರಾಜ್ಯಪಾಲರ ಆಡಳಿತದಲ್ಲಿ ಹೊರ ರಾಜ್ಯದಲ್ಲಿ ಮದ್ಯಸಾರವನ್ನು ತಯಾರು ಮಾಡತಕ್ಕ ಜನಗಳಿಗೆ Indian made foreign liquor outside Karnataka ಯಾರು ಮಾಡುತ್ತಿದ್ದರು, ಅವರಿಗೆ free ಪರ್ಮಿಟ್ಟನ್ನು ಕರ್ನಾಟಕದಲ್ಲಿ ಕೊಟ್ಟಿದ್ದರು. ಹೇಳುವವರು ಕೇಳುವವರು ಯಾರೂ ಇರಲಿಲ್ಲ. ಇದು ರಾಜ್ಯಪಾಲರ ಆಡಳಿತದಲ್ಲಿ ಜಾರಿಗೆ ಬಂದಿದೆ, ಇದನ್ನು ಡಿಸಿಪ್ಲೀನ್ ಎಂದು ಹೇಳುತ್ತೀರಾ ? ಇದು ಒಂದು ಕಡೆಯಾದರೆ ಸ್ವೇಚ್ಛಾಚಾರದ ಆಡಳಿತ ನಡೆದ ಬಗ್ಗೆ ರಾಜ್ಯಪಾಲರ ಭಾಷಣದ ಬಗ್ಗೆ ಚರ್ಚೆ ಮಾಡುವಾಗ ಇದನ್ನೆಲ್ಲಾ ಹೇಳುತ್ತೇನೆ. ಈ ೧೧ ತಿಂಗಳಲ್ಲಿ ರಾಜ್ಯಪಾಲರ ಆಡಳಿತದಲ್ಲಿ ಏನೇನು ಅನ್ಯಾಯಗಳು ಈ ರಾಜ್ಯದಲ್ಲಿ ನಡೆಯಿತೆಂದು ಹೇಳುತ್ತೇನೆ. ಆದರೆ ಇವತ್ತು ಬಹಳ ಪಾಯಿಂಟಾಗಿ ಈ ಸಪ್ಲಿಮೆಂಟರಿ ಬಜೆಟ್ ಬಗ್ಗೆ ಮಾತನಾಡತಕ್ಕ ಸಂದರ್ಭದಲ್ಲಿ ಒಂದೆರಡು ವಿಷಯವನ್ನು ತಮ್ಮ ಗಮನಕ್ಕೆ ತರುವುದಕ್ಕೆ ಬಯಸುತ್ತೇನೆ. Award of pre-matric scholarship 15 lakhs non-plan committed expenditure, post-matric scholarship in 1984-85 Rs. 15 lakhs ೧೫ ಲಕ್ಷ ರೂಪಾಯಿ ನಾನ್‌ಪ್ಲಾನ್ ಎಕ್ಸ್‌ಪೆಂಡಿಚರ್ ಆಗಿರುವುದು ಇದು ತಮ್ಮ ತಪ್ಪಲ್ಲ. ಈ ಖರ್ಚಿಗೆಲ್ಲ ನೀವು ಜವಾಬ್ದಾರರಲ್ಲ, ನಮ್ಮ ಸರ್ಕಾರವೂ ಆಗ ಇರಲಿಲ್ಲ.- ಅಲ್ಲ. ನಾನು ಕೆಲವು ದಿನ ಸಮಾಜ ಕಲ್ಯಾಣ ಮಂತ್ರಿಯಾಗಿದ್ದರಿಂದ ನನ್ನ ಅನುಭವದಿಂದ ತಮ್ಮ ಗಮನಕ್ಕೆ ಕೆಲವು ವಿಚಾರಗಳನ್ನು ತರುವುದಕ್ಕೆ ಇಷ್ಟಪಡುತ್ತೇನೆ. ನಮ್ಮಲ್ಲಿ ಖಾಸಗಿ ಶಿಕ್ಷಣ ಸಂಸ್ಥೆಗಳು ಏನಿವೆ ಅಲ್ಲಿ ಹಿಂದುಳಿದ ವರ್ಗಗಳ ಬಾಲಕರ ಹಾಸರಿನಲ್ಲಿ ಬಹಳ ದೊಡ್ಡ ಶೋಷಣೆ ನಡೆಯುತ್ತಿದೆ. ವಿದ್ಯಾರ್ಥಿಗಳ ಹಾಜರಿ ಅಲ್ಲಿ ಜೂನ್, ಜುಲೈ ತಿಂಗಳಿನಲ್ಲಿ ಶಾಲೆಗೆ ಸೇರಿದಾಗಲೇ ಫೀಜನ್ನು ತೆಗೆದುಕೊಳ್ಳುತ್ತಾರೆ. ಇದಾದ ಮೇಲೆ ಮಾರ್ಚ್ ತಿಂಗಳಿನಲ್ಲಿ ಅಲ್ಲಿರತಕ್ಕ ಜಿಲ್ಲಾಧಿಕಾರಿಗಳನ್ನು ಹಿಡಿದು ಅವರ ಮೇಲೆ ಒತ್ತಡ ತಂದು ಫಾಲ್ಸ್ ಬಿಲ್‌ಗಳನ್ನು ತಂದು ಕಾಲೇಜಿನ ಶಿಕ್ಷಣ ಸಂಸ್ಥೆಯವರಿಂದ ಹಣವನ್ನು ಪಡೆಯುತ್ತಾರೆ. ಇದು ಹಿಂದಿನಿಂದ ನಡೆದುಕೊಂಡು ಬಂದಿರತಕ್ಕದ್ದು. ಇದನ್ನು ತಡೆಗಟ್ಟುವುದಕ್ಕೆ ಪ್ರಾಮಾಣಿಕ ಪ್ರಯತ್ನ ನಾನು ಮಾಡಿದ್ದೆ. ಆದು ಭಾಗಶಃ ಯಶಸ್ವಿಯಾಗಿತ್ತು. ಆದಕ್ಕೆ ಬಹಳ ಕಡೆ ವಿರೋಧ ಬಂತು. ಆದರೂ ಹಿಂದುಳಿದ ವರ್ಗದ ಜನಗಳ ಪರವಾಗಿ ಈ ಒಂದು ನಿರ್ಧಾರ ಆಗತ್ಯವಾಗಿದೆ. ೧೫ ಲಕ್ಷ—೩೦ ಲಕ್ಷ ಎಕ್ಸ್‌ಟ್ರಾ ಎಕ್ಸ್‌ಪೆಂಡಿಚರ್ ಅಂತ ಇಲ್ಲಿ ಹೇಳಿದ್ದಾರೆ. ನಿಮ್ಮ ಮುಂದಿನ ಆರ್ಥಿಕ ಭದ್ರತೆಯ ದೃಷ್ಟಿಯಿಂದ ಈ ಪ್ರಸ್ತಾವನ್ನು ಸರ್ಕಾರಕ್ಕೆ ತಿಳಿಸಲಿಕ್ಕೆ ಬಯಸುತ್ತೇನೆ. ಇವರ ಬಗ್ಗೆ ತಾವು ಬಿಗಿಯಾದ ಕ್ರಮವನ್ನು ತೆಗೆದುಕೊಳ್ಳಬೇಕು. ಫೆಬ್ರುವರಿ ಅಥವಾ ಡಿಸೆಂಬರ್ ಒಳಗಾಗಿ ಎಲ್ಲ ಸ್ಕಾಲರ್‌ಶಿಪ್‌ಗಳು ವಿಲೇವಾರಿ ಆಗುವಂತೆ ಕ್ರಮಗಳನ್ನು ತೆಗೆದುಕೊಂಡರೆ ಈ ರೀತಿ ನಾನ್ ಪ್ಲಾನ್ ಎಕ್ಸ್‌ಪೆಂಡಿಚರ್ ಎಕ್ಸ್‌ಟ್ರಾ ಆಗುವುದಿಲ್ಲ. ಯಾವುದೇ ರೀತಿಯ ದುರುಪಯೋಗ ಸಹ ಆಗುವುದಿಲ್ಲ. Scholarships to Physically Handicapped—Rs 30 lakhs ಅಂತ ಬಂದಿದೆ, ಇದನ್ನು ಕೇಂದ್ರ ಸರ್ಕಾರ ಕೊಡುತ್ತದೆ ನಿಜ ೧೦೦ಕ್ಕೆ ೧೦೦ರಷ್ಟು ಕೇಂದ್ರ ಸರ್ಕಾರ ಕೊಡುವ ಹಣ ಇದು. ಆದರೆ ಇದರಲ್ಲಿ ಬಹಳ ದುರುಪಯೋಗ ಆಗುತ್ತಿದೆ, Physically handicapped scholarship ಏನಿದೆ ಇದನ್ನು ಒಂದು ಬೆರಳು ಇಲ್ಲದವರು ತೆಗೆದುಕೊಳ್ಳುತ್ತಾರೆ. ಒಂದು ಬೆರಳು ಸೊಟ್ಟ ಆದವರೂ ಕೂಡ ಈ ಸ್ಕಾಲರ್‌ಶಿಪ್ ತೆಗೆದುಕೊಳ್ಳುತ್ತಾರೆ. ಇದು ಕೇಂದ್ರ ಸರ್ಕಾರದ ಹಣ ಇರಲಿ, ರಾಜ್ಯ ಸರ್ಕಾರದ ಹಣ ಇರಲಿ, ಈ ಅನ್ಯಾಯವನ್ನು ತಡೆಗಟ್ಟಬೇಕಾದರೆ, ತಾವು ಸಂಬಂಧಪಟ್ಟ ಇಲಾಖೆಯ ಅಧಿಕಾರಿಗಳ ಮೇಲೆ ಸ್ವಲ್ಪ ಶಿಸ್ತಿನ ಕ್ರಮ ತಂದರೆ ಸಾಧ್ಯ ಎಂದು ನಾನು ತಿಳಿದಿದ್ದೇನೆ. ಕೊನೆಯದಾಗಿ ನಾನ್ ಪ್ಲಾನ್ ಎಕ್ಸ್‌ಪೆಂಡಿಚರ್ ಕಟ್ ಮಾಡಲಿಕ್ಕೆ ತಾವು ಹೊರಟಿದ್ದೀರಿ. ಆದನ್ನು ನಾವು ಸ್ವಾಗತ ಮಾಡಿದ್ದೇವೆ, ಅದನ್ನು ಮಾಡಬೇಕು, ಅದಕ್ಕೆ ನಾವು ಬೆಂಬಲ ಕೊಟ್ಟಿದ್ದೇವೆ. ರಾಜ್ಯಪಾಲರ ಆಡಳಿತದಲ್ಲಿ ಆಗಿರತಕ್ಕ ನಾನ್ ಪ್ಲಾನ್ ಎಕ್ಸ್‌ಪೆಂಡಿಚರ್ ಏನಿದೆ ಅವರ ಬಗ್ಗೆ ಯೋಚನೆ ಮಾಡ

ಬೇಕಾಗಿದೆ. ಜನತೆಯ ಸರ್ಕಾರ ಇದ್ದರೆ, ಗದು ಹೋದಂಥ ಚುನಾಯಿತ ಪ್ರತಿನಿಧಿಗಳ ಒತ್ತಡಕ್ಕೆ ತಂದರು ಎಂದು ಹೇಳುತ್ತಾರೆ, ರಾಜ್ಯಪಾಲರ ಆಡಳಿತದಲ್ಲಿ ಅಧಿಕಾರಿಗಳೇ ಇದ್ದು ಫೈನಾನ್ಷಿಯಲ್ ಡಿಸಿಪ್ಲಿನ್ ಅನ್ನು ಏತಕ್ಕೆ ಜಾರಿಗೆ ತರಲಿಲ್ಲ. ಇದು ಅರ್ಥವಾಗದ ವಿಚಾರವಾಗಿರುವುದರಿಂದ ಇದರ ಕಡೆ ತಾವು ಗಮನ ಕೊಡಬೇಕೆಂದು ಹೇಳುತ್ತೇನೆ. ಒಂದು ವಿಚಾರವನ್ನು ತಮ್ಮ ಅಪ್ಪಣೆ ಪಡೆದು ಈ ಸಂದರ್ಭದಲ್ಲಿ ಹೇಳುತ್ತೇನೆ. ಬಜೆಟ್ ಮೇಲೆ ಉತ್ತರ ಮುಂಗಿದ ಮೇಲೆ ತಾವು ಕ್ಲಾರಿಫಿಕೇಷನ್‌ಗೆ ಅವಕಾಶ ಕೊಡಲಿಲ್ಲ. ಓ.ಎ.ಪಿ. ಹಣ ಸಂಬಂಧಪಟ್ಟವರಿಗೆ ೩-೪ ತಿಂಗಳಾದರೂ ತಲುಪುತ್ತಿಲ್ಲ. ನಾನು ಇತ್ತೀಚೆಗೆ ೨-೩ ಜಿಲ್ಲೆಗಳಲ್ಲಿ ಪ್ರವಾಸ ಮಾಡಿ ಬಂದಿದ್ದೇನೆ. ೪-೫ ತಿಂಗಳಿಂದಲೂ ಓ.ಎ.ಪಿ. ಹಣ ಸಂಬಂಧಪಟ್ಟವರಿಗೆ ಮುಟ್ಟಿರುವುದಿಲ್ಲ. ಪೋಸ್ಟ್‌ಮ್ಯಾನ್‌ಗಳು ೪-೫ ತಿಂಗಳ ಹಣವನ್ನು ಒಟ್ಟಿಗೆ ಕೊಟ್ಟು, ೫೦-೬೦ ರೂಪಾಯಿಗಳನ್ನು ಹಿಡಿದುಕೊಂಡು ಕೊಡುತ್ತಾರೆ. ಇದನ್ನು ತಪ್ಪಿಸಲು ಎಂಟೈರ್ ಸಿಸ್ಟಮ್ಮೇ ಬದಲಾಯಿಸಿ, ಬ್ಯಾಂಕುಗಳಲ್ಲಿ ಆಕೌಂಟ್ ಪ್ರಾರಂಭ ಮಾಡಿ, ನೇರವಾಗಿ ಹಣ ತಲುಪತಕ್ಕ ವ್ಯವಸ್ಥೆ ಮಾಡಬೇಕೆಂದು ಹೇಳುತ್ತೇನೆ, ಇನ್ನು ಹಸಿರು ಕಾರ್ಡುಗಳ ಮೂಲಕ ಕೊಡತಕ್ಕ ಅಕ್ಕಿ ಪ್ರಮಾಣ ನಾವು ಇದ್ದಾಗಲೇ ಕಡಿಮೆಯಾಗಿತ್ತು. ೧೦ ಕೆ.ಜಿ. ಕೊಡುತ್ತಿದ್ದೆವು. ಈಗ ೫ ಕೆ.ಜಿ ಗೆ ಇಳಿಸಿದ್ದಾರೆಂದು ತಿಳಿದು ಬಂದಿದೆ. ಇದು ಬಹಳ ತಪ್ಪು. ಮತ್ತೆ ೧೦ ಕೆ.ಜಿ. ಕೊಡುವಂತೆ ವ್ಯವಸ್ಥೆ ಮಾಡಬೇಕೆಂದು ಹೇಳುತ್ತೇನೆ.

ಶ್ರೀ ಕೆ. ಜೆ. ಜಾರ್ಜ್—ಹಸಿರು ಕಾರ್ಡುಗಳ ಮೂಲಕ ೧೦ ಕೆ.ಜಿ. ಅಕ್ಕಿ ಕೊಡುತ್ತಿದ್ದೇವೆ. ಪುನರ್ ಆರಂಭ ಮಾಡುವ ಪ್ರಶ್ನೆಯೇ ಇಲ್ಲ.

ಶ್ರೀ ಪಿ. ಜಿ. ಆರ್. ಸಿಂಧ್ಯ.—ಹಾಗಾದರೆ, ಅಕ್ಕಿ ತಲುಪುತ್ತಿಲ್ಲ. ಇದರ ಬಗ್ಗೆ ಮಾಹಿತಿ ಕೊಡುತ್ತೇನೆ. ಮಾನ್ಯ ಮಂತ್ರಿಗಳು ಕ್ರಮ ತೆಗೆದುಕೊಳ್ಳಬೇಕು. ಟ್ರೆಜರಿಗಳಲ್ಲಿ ಫೈನೆನ್ಷಿಯಲ್ ಡಿಸಿಪ್ಲಿನ್ ತರುವ ದೃಷ್ಟಿಯಿಂದ ಎಕ್ಸ್‌ಪೆಂಡಿಚರ್ ಮಾಡುವಾಗ ಟ್ರೆಜರಿಗೆ ಕೆಲವು ಸಂದರ್ಭದಲ್ಲಿ ಅನ್ ರಿಟರ್ನ್ಡ್ ಡೈರೆಕ್ಷನ್ ಕೊಡುತ್ತೇವೆ. ಆದರೆ, ಟ್ರೆಜರಿಯಲ್ಲಿ ಕೆಲಸ ಮಾಡತಕ್ಕ ಅಧಿಕಾರಿಗಳು ಇದರ ದುರುಪಯೋಗವನ್ನು ಮಾಡಿಕೊಂಡು, ಕೆಲವು ಬಿಲ್‌ಗಳನ್ನು ಪಾಸು ಮಾಡುವಾಗ ಹಣ ಪಡೆಯುತ್ತಾರೆಂದು ತಿಳಿದು ಬಂದಿದೆ, ಸರ್ಕಾರದ ಹಿತದೃಷ್ಟಿಯಿಂದ ರಾಜ್ಯದ ಬೊಕ್ಕಸದ ಹಿತದೃಷ್ಟಿಯಿಂದ ಇದು ತಪ್ಪಬೇಕು. ಈ ಬಗ್ಗೆ ತಾವು ಮತ್ತು ತಮ್ಮ ಇಲಾಖೆಯ ಅಧಿಕಾರಿಗಳು ತಕ್ಷಣವೇ ತೀವ್ರ ಕ್ರಮ ತೆಗೆದುಕೊಳ್ಳಬೇಕೆಂದು ಹೇಳುತ್ತೇನೆ. ಈ ಸಪ್ಲಿಮೆಂಟರಿ ಎಸ್ಟಿಮೇಟ್ ಅನ್ನು ಸದನದ ಮುಂದೆ ತಂದಿದ್ದೀರಿ, ರಾಜ್ಯಪಾಲರ ಆಡಳಿತದಲ್ಲಿ ಹೆಚ್ಚಿನ ಖರ್ಚು ಮತ್ತು ಅಪವ್ಯಯ ಆಗಿರುವುದರಿಂದ ಇದನ್ನು ವಿರೋಧಿಸಿ, ನಾನು ಕೊಟ್ಟಿರುವಂಥ ಸಲಹೆಗಳನ್ನು ಗಮನದಲ್ಲಿಟ್ಟುಕೊಳ್ಳಬೇಕೆಂದು ತಿಳಿಸಿ, ನನಗೆ ಮಾತನಾಡಲು ಅವಕಾಶ ಕೊಟ್ಟ ಅಧ್ಯಕ್ಷರಿಗೆ ವಂದಿಸಿ, ನನ್ನ ಮಾತುಗಳನ್ನು ಮುಗಿಸುತ್ತೇನೆ.

† ಶ್ರೀ ಹೆಚ್. ಏಕಾಂತಯ್ಯ (ಚಿತ್ರದುರ್ಗ).—ಮಾನ್ಯ ಅಧ್ಯಕ್ಷರೇ, ಈಗಾಗಲೇ ೧೯೯೯-೨೦ನೇ ಸಾಲಿಗೆ ಸಂಬಂಧಪಟ್ಟಂತೆ ಮೊದಲನೇ ಕಂತಿನ ಪೂರಕ ಅಂದಾಜುಗಳಿಗೆ ಈ ಮನೆ ಒಪ್ಪಿಗೆ ಕೊಟ್ಟಿದೆ. ಈಗ 2ನೇ ಕಂತಿನ ಪೂರಕ ಅಂದಾಜುಗಳನ್ನು ಇಡಲಾಗಿದೆ. ಈ ಎರಡನ್ನೂ ಒಟ್ಟಿಗೆ ಸೇರಿಸಿ ಇಡಲಿಕ್ಕೆ ಸಾಧ್ಯವಿತ್ತೇನೊ ಎಂದು ನನಗನ್ನಿಸುತ್ತದೆ. ಮಾನ್ಯ ಮುಖ್ಯಮಂತ್ರಿಗಳು ಹಾಗೂ ಹಣಕಾಸಿನ ಮಂತ್ರಿಗಳು ನಿರರ್ಥಕವಾದ ವೆಚ್ಚಗಳನ್ನು ಕಡಿಮೆ ಮಾಡುತ್ತೇವೆಂದು ಹೇಳಿದ್ದಾರೆ. ಯೋಜನೇತರ ವೆಚ್ಚಗಳು ಇರಬಹುದು, ಅಭಿವೃದ್ಧಿಯೇತರ ವೆಚ್ಚಗಳು ಇರಬಹುದು. ಆದರೆ ಪೂರಕ ಅಂದಾಜುಗಳನ್ನು ಗಮನಿಸಿದಾಗ ಅಭಿವೃದ್ಧಿಯೇತರ ವೆಚ್ಚಗಳೇ ಹೆಚ್ಚಾಗಿ ಕಾಣುತ್ತಿವೆ.

ಈ ಬಗ್ಗೆ ಒಂದೆರಡು ವಿಚಾರವನ್ನು ಪ್ರಸ್ತಾಪ ಮಾಡುವುದಾದರೆ, ಇತ್ತೀಚೆಗೆ ಗಾಜಿನ ಮನೆ ರಿಪೇರಿ ಮಾಡಲು ೩೦ ಲಕ್ಷ ರೂಪಾಯಿಗಳನ್ನು ಖರ್ಚು ಮಾಡಿದ್ದಾರೆ. ಇದು ಅಭಿವೃದ್ಧಿ ವೆಚ್ಚವನ್ನು ಅಥವಾ ನಿರರ್ಥಕ ವೆಚ್ಚವನ್ನು ಕಡಿಮೆ ಮಾಡಲಿಕ್ಕೆ ಮಾಡಿದಂಥ ಪ್ರಯತ್ನವೇ ಎಂದು ಕೇಳುತ್ತೇನೆ ? ಈ ಸರ್ಕಾರ ಆಡಳಿತಕ್ಕೆ ಬಂದಮೇಲೆ ಈ ರೀತಿ ಆಗಿದೆಯೋ ಅಥವಾ ಮೊದಲು ಸಹ ಆಗಿದೆಯೋ ನನಗೆ ಗೊತ್ತಿಲ್ಲ. ಆದರೆ ಇಂತಹ ವೆಚ್ಚದ ಬಗ್ಗೆ ಪುನರ್‌ಪರಿಶೀಲನೆ ಮಾಡಬೇಕಾಗಿದೆ. ಅದಕ್ಕಿಂತಲೂ ಹೆಚ್ಚಾಗಿ ಈ ಹಿಂದೆ ಕೈಮಗ್ಗದ ಬಟ್ಟೆಗಳನ್ನು ಪ್ರೋತ್ಸಾಹ ಮಾಡಲಿಕ್ಕೆ ನಾವು ರಿಯಾಯಿತಿಯನ್ನು ಕೊಡುತ್ತಿದ್ದೆವು. ಆ ರಿಯಾಯಿತಿಯನ್ನು ಕೊಡುವ ಸಂದರ್ಭದಲ್ಲಿ ಸಂಬಂಧಪಟ್ಟವರು ಏನು ಬೇಡಿಕೆಯನ್ನು ಇಡುತ್ತಿದ್ದರು, ಆ ಬೇಡಿಕೆಯನ್ನು ಪರಿಶೀಲಿಸುವುದು ರೂಢಿಯಲ್ಲಿತ್ತು. ಆದು ಏನು ಕಾರಣವೋ, ಏನೋ ಗೊತ್ತಿಲ್ಲ, ಕಳೆದ ಹಲವಾರು ವರ್ಷಗಳಿಂದ ಅವರು ಯಾವುದೇ ಬೇಡಿಕೆಯನ್ನು ಇಡಲಿ, ನಮಗೆ ಇಷ್ಟು ಸಬ್ಸಿಡಿ ಕೊಡಬೇಕು ಎಂದು ಕೇಳದ ತಕ್ಷಣ ಅದನ್ನು ಯಾರೂ ವೆರಿಫೈ ಮಾಡುವಂಥ ಅವಶ್ಯಕತೆ ಇಲ್ಲ ಎನ್ನುವ ಒಂದು ರಾನೂನು ಅಥವಾ ಸರ್‌ಕ್ಯುಲರ್ ನಮ್ಮ ರಾಜ್ಯದಲ್ಲಿ ಜಾರಿಯಲ್ಲಿದೆ ಎಂಬುದನ್ನು

ಹೇಳಲಿಕ್ಕೆ ವಿಷಾದಪಡುತ್ತೇನೆ. ಈಗ ಯಾವ ಒಂದು ಆಧಾರದ ಮೇಲೆ ಯಾವ ಒಂದು ವೆರಿಫಿಕೇಷನ್ ಇಲ್ಲದೇ ಹಣವನ್ನು ಪಡೆಯಲಿಕ್ಕೆ ಪ್ರಯತ್ನ ಮಾಡತಕ್ಕ ಜನರಿಗೆ ಈಗ ಒಂದು ಹೊಸ ರೀತಿಯಲ್ಲಿ ಈ ಮಾರುಕಟ್ಟೆ ಅಭಿವೃದ್ಧಿ ಸಹಾಯಂ ಅಂತ ಕೊಡುತ್ತಾರೆ. ಮಾರುಕಟ್ಟೆ ಮ್ಯಾನೇಜಿರಿಯಲ್ ಸಬ್ಸಿಡಿ ಅಂತ ಯಾವ ಆಧಾರದ ಮೇಲೆ ಕೊಡುತ್ತೇವೆ ಎಂದು ಹೇಳಿದಿರಿ, ಹಿಂದೆ, ಯಾವುದೇ ವೆರಿಫಿಕೇಷನ್ ಇಲ್ಲದೇ ಈ ಸಹಾಯಧನವನ್ನು ರಿಬೇಟ್ ಎಂದು ಕೇಳುತ್ತಿದ್ದರು. ಆ ಹಣದ ಆಧಾರದ ಮೇಲೆ ಕೊಡಬೇಕೆಂಬ ಒಂದು ತೀರ್ಮಾನವನ್ನು ಸರ್ಕಾರ ತೆಗೆದುಕೊಂಡಿದೆ ಎಂದು ನಾನು ಭಾವಿಸಿದ್ದೇನೆ. ಇದು ಸರಿಯಲ್ಲ ಇದರ ಬಗ್ಗೆ ಪುನರ್ ಆಲೋಚನೆಯನ್ನು ಮಾಡಬೇಕು. ರಿಬೇಟ್ ಕೊಡಲಿಕ್ಕೆ ನಾವು ವಿರೋಧ ಮಾಡುವುದಿಲ್ಲ. ಯಾರು ವೆರಿಫೈ ಮಾಡದೇ ರಿಬೇಟ್ ತೆಗೆದುಕೊಂಡಿದ್ದಾರೆ, ಅದೇ ಆಧಾರದ ಮೇಲೆ ಕೇಂದ್ರಸರ್ಕಾರ ಶೇಕಡ ೫೦ರಷ್ಟು ಕೊಡುತ್ತಾರೆ ಎನ್ನುವ ಒಂದೇಒಂದು ಕಾರಣ ಕ್ಕೋಸ್ಕರ ಕೊಡುವಂಥ ನೀತಿಯನ್ನು ಅನುಸರಿಸಿದರೆ ತಪ್ಪಾಗುತ್ತದೆ. ಇದರ ಬಗ್ಗೆ ಪುನರಾಲೋಚನೆ ಯನ್ನು ಮಾಡಬೇಕು. ನಾನು ಮತ್ತೊಂದು ವಿಚಾರವನ್ನು ಪ್ರಸ್ತಾಪಮಾಡಬೇಕಾಗಿದೆ, ಕೇಂದ್ರ ಸರ್ಕಾರ ಅಥವಾ ಎನ್‌ಸಿಡಿಸಿಯಿಂದ ಸಹಕಾರ ಸಂಸ್ಥೆಗಳಿಗೆ ಸಾಲ ಕೊಡುವ ಬಗ್ಗೆ ಅವರು ಹೆಚ್ಚುವರಿ ಬೇಡಿಕೆಯನ್ನು ಇಟ್ಟಿದ್ದಾರೆ. ಕೊಡಲಿ, ಆದರೆ ಒಂದು ಮಾತನ್ನು ಇಲ್ಲಿ ಪದೇಪದೇ ಹೇಳುತ್ತಾರೆ. ಏನೆಂದರೆ ನಾವು ಬಹಳ ಬಿಗಿ ಇರುತ್ತೇವೆ ಎನ್ನುವ ಮಾತನ್ನು ಹೇಳುತ್ತಾರೆ. ರಾಜ್ಯಸರ್ಕಾರದಿಂದ ಎನ್‌ಸಿಡಿಸಿಗೆ ಯಾವುದೇ ಯೋಜನೆಯನ್ನು ಕಳುಹಿಸದೇ ಇದ್ದರೂ ಅಂತಹ ಯೋಜನೆಯನ್ನು ಪುರಸ್ಕರಿಸಿ ಹಣವನ್ನು ಬಿಡುಗಡೆ ಮಾಡಿದ್ದಾರೆ ಬಿಡುಗಡೆ ಮಾಡಿದಾಗ ಅದು ಕಾನೂನು ಬದ್ಧ ಅಲ್ಲ ಎನ್ನುವ ಮಾತನ್ನು ಹೇಳಿದ್ದಾಗ ಸಂಬಂಧಪಟ್ಟ ಅಧಿಕಾರಿಗಳು ಯಾವುದೇ ಕಡತ ಇಲ್ಲದೇ ಹಣವನ್ನು ಬಿಡುಗಡೆ ಮಾಡುವ ಸಂದರ್ಭ ನಮ್ಮ ರಾಜ್ಯದ ಅಡಳಿತದಲ್ಲಿ ನಡೆಯುತ್ತಿದೆ ಯಾವುದೇ ಒಬ್ಬ ಅಧಿಕಾರಿಗೆ ತನ್ನ ಅಧಿಕಾರದ ಇತಿಮಿತಿ ಗೊತ್ತಿಲ್ಲ. ಇಂತಹವರು ತಮ್ಮ ಅಧಿಕಾರವನ್ನು ದುರುಪಯೋಗ ಮಾಡಿದಾಗ ಅವರ ಮೇಲೆ ಕ್ರಮ ತೆಗೆದುಕೊಳ್ಳುವಂಥ ಮನೋಭಾವನೆ ಬಾರದೇ ಇದ್ದರೆ ಖಂಡಿತವಾಗಿ ಇಂತಹ ಪ್ರಸಂಗಗಳು ಪದೇ ಪದೇ ನಡೆಯುತ್ತವೆ. ಆದ್ದರಿಂದ ಇವುಗಳಿಗೆ ಕಡಿವಾಣ ಹಾಕುವಂಥ ರೀತಿಯಲ್ಲಿ ಮಾನ್ಯ ಅರ್ಥಮಂತ್ರಿಗಳು ಇದರ ಬಗ್ಗೆ ಆಲೋಚನೆಯನ್ನು ಮಾಡಬೇಕೆಂದು ಹೇಳುತ್ತೇನೆ. ತದನಂತರ ಒಂದು ಮಾತನ್ನು ಹೇಳಬೇಕಾಗಿದೆ. ಬಡ್ಜೆಟ್ ಚರ್ಚೆಯಲ್ಲಿ ಮಾತನಾಡಿದ್ದಕ್ಕೆ ನನಗೆ ಉತ್ತರ ಬರಲಿಲ್ಲ. ಆದ್ದರಿಂದ, ಈಗ ಪುನಃ ಹೇಳುತ್ತಿದ್ದೇನೆ. ಮಾಗಾಟ ತೆರಿಗೆ ಕೊನೇ ಹಂತದ ಒಂದು ನೀತಿಯನ್ನು ಅವರು ಏನು ನಿರೂಪಣೆ ಮಾಡಿದ್ದಾರೆ ಅದರ ಬಗ್ಗೆ ಮಾನ್ಯ ಅರ್ಥಮಂತ್ರಿಗಳು ಈಗಲಾದರೂ ಸಹ ಅವಶ್ಯಕವಾದಂಥ ಉತ್ತರವನ್ನು ಕೊಡಬೇಕು. ಆ ರೀತಿ ಉತ್ತರವನ್ನು ಕೊಡುವುದರ ಮೂಲಕ ಎಲ್ಲರ ಮನಸ್ಸಿನಲ್ಲಿರುವಂಥ ಸಂಶಯವನ್ನು ನಿವಾರಣೆ ಮಾಡಲಿಕ್ಕೆ ಪ್ರಯತ್ನ ಮಾಡಬೇಕು ಎನ್ನುವ ಮಾತನ್ನು ಹೇಳಿ, ಈ ಪೂರಕ ಅಂದಾಜು ಬೇಡಿಕೆಯನ್ನು ವಿರೋಧ ಮಾಡುತ್ತಾ ನನ್ನ ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ಕೆ. ಜೆ. ಜಾರ್ಜ್.—ಅಧ್ಯಕ್ಷರೆ, ನಾನು ಮಾನ್ಯ ಸಿಂಧ್ಯ ಅವರ ಪ್ರಶ್ನೆಗೆ ಉತ್ತರ ಹೇಳ ಬೇಕಾಗಿದೆ. ಮೊದಲು ನಾನು ಅವರಿಗೆ ಹಸಿರು ಕಾರ್ಡ್ ಹೊಂದಿದವರಿಗೆ ೧೦ ಕೆ.ಜಿ. ಅಕ್ಕಿ ಕೊಡಲಾಗುತ್ತಿದೆ ಎಂದು ಹೇಳಿದ್ದೆ. ಅದಕ್ಕೆ ಬದಲು ಈಗ ೫ ಕೆ. ಜಿ. ಅಕ್ಕಿ ಮತ್ತು ೫ ಕೆ. ಜಿ. ಗೋಧಿ ಕೊಡುತ್ತಿದ್ದಾರೆ. ಮೊದಲಿನಿಂದಲೂ ಇದು ಹಾಗೆಯೇ ಇದೆ.

ಶ್ರೀ ಎಂ. ರಾಜಶೇಖರಮೂರ್ತಿ.—ಸನ್ಮಾನ್ಯ ಅಧ್ಯಕ್ಷರೆ, ಸಪ್ಲಿಮೆಂಟರಿ ಬಡ್ಜೆಟ್ ಮೇಲೆ ಮಾತನಾಡುತ್ತಾ ಶ್ರೀಮಾನ್ ಸಿಂಧ್ಯ ಅವರು ಕೆಲವು ವಿಚಾರಗಳ ಬಗ್ಗೆ ಮಾಹಿತಿಯನ್ನು ಕೋರಿದ್ದಾರೆ. ಮೊದಲನೆಯದಾಗಿ ಅವರು ಜನತಾದಳ ಸರ್ಕಾರ ಬಿಟ್ಟಮೇಲೆ ಮತ್ತು ನಮ್ಮ ಕಾಂಗ್ರೆಸ್ ಸರ್ಕಾರ ಅಧಿಕಾರಕ್ಕೆ ಬರುವುದಕ್ಕೆ ಮುಂಚೆ ಕೇಂದ್ರದಿಂದ ಏನು ಸಹಾಯಧನ ಬಂತು ಎಂಬ ಪ್ರಶ್ನೆಯನ್ನು ಕೇಳಿದ್ದಾರೆ. ಕೇಂದ್ರದಿಂದ ನೇರವಾಗಿ ಯಾವ ವಿಧವಾದ ಸಹಾಯಧನ ಈ ವಿಚಾರವಾಗಿ ಬಂದಿಲ್ಲ. ಈಗ ಏನಾಗಿದೆ ಅಂದರೆ ಕೇಂದ್ರದವರ ಪ್ರಭಾವದಿಂದಲೇ ಯೂನಿಟ್ ಟ್ರಸ್ಟ್ ಆಫ್ ಇಂಡಿಯಾದವರು ೨೦೦ ಕೋಟಿ ರೂಪಾಯಿಗಳನ್ನು ಈ ಎನ್‌ಎಸ್‌ಸಿಯಲ್ಲಿ ಇನ್‌ವೆಸ್ಟ್‌ಮೆಂಟ್ ಮಾಡಿದ್ದಾರೆ. ಸುಮಾರು ೨೦೦ ಕೋಟಿಯನ್ನು ಎನ್‌ಎಸ್‌ಸಿ ರೂಪದಲ್ಲಿ ಇನ್ ವೆಸ್ಟ್ ಮಾಡಿದರೆ ಅದರಲ್ಲಿ ಶೇಕಡ ೭೫ ಪರ್ಸೆಂಟ್ ನಷ್ಟು ಹಣ ಅಂದರೆ ಸುಮಾರು ೧೫೦ ಕೋಟಿಯಷ್ಟು ಹಣವನ್ನು ರಾಜ್ಯ ಸರಕಾರಕ್ಕೆ ಸಾಲದ ರೂಪದಲ್ಲಿ ಕೊಟ್ಟಿದ್ದಾರೆ, ಮಾನ್ಯ ಸಿಂಧ್ಯರವರೂ ಕೂಡ ಮಂತ್ರಿಯಾಗಿದ್ದವರು, ಅವರಿಗೆ ಇದೆಲ್ಲವೂ ಅರ್ಥವಾಗಿದೆ ಎಂದು ನಾನು ತಿಳಿದುಕೊಂಡಿದ್ದೇನೆ. ಇನ್ನು ಖಾಸಗೀ ಸಂಸ್ಥೆಗಳಲ್ಲಿನ ಹಿಂದುಳಿದ ಜನಾಂಗದ ಮಕ್ಕಳು ಯಾರಿದ್ದಾರೆ ಅವರ ಹೆಸರಿನಲ್ಲಿ ಆ ಸಂಸ್ಥೆಯವರು ಹಣವನ್ನು ಪಡೆದು ಅಂದರೆ ಅವರ ಸ್ಕಾಲರ್‌ಷಿಪ್ ಹಣವನ್ನು ಪಡೆದು ಅವರಿಗೆ ಕೊಡದಿರುವುದರಿಂದ ಅದರ ದುರುಪಯೋಗವಾಗುತ್ತಿದೆ. ಅದರ ಬಗ್ಗೆ ವಿಮರ್ಶೆ ಮಾಡಬೇಕು ಹಾಗೂ ವಿಚಾರಣೆ ಮಾಡಬೇಕೆನ್ನುವ ಅರ್ಥದಲ್ಲಿ ಮಾನ್ಯ ಸದಸ್ಯರು

ಹೇಳಿದ್ದಾರೆ. ನಾನು ಮಾನ್ಯ ಸಮಾಜ ಕಲ್ಯಾಣ ಸಚಿವರಿಗೆ ಇದರ ಬಗ್ಗೆ ವಿಚಾರಣೆ ಮಾಡಿ ಎಂದು ತಿಳಿಸುತ್ತೇನೆ. ಇನ್ನು ಒ ಎ ಪಿ ಬಗ್ಗೆ ಮಾನ್ಯ ಸದಸ್ಯರು ಪ್ರಸ್ತಾಪ ಮಾಡುತ್ತಾ ಕೆಲವು ಕಡೆಗಳಲ್ಲಿ ವೃದ್ಧಾಪ್ಯ ವೇತನ ನಿಂತು ಹೋಗಿದೆ ಎಂದು ಹೇಳಿದರು. ಅದರ ಬಿಸಿ ನನಗೂ ತಟ್ಟಿದೆ. ನನ್ನ ಕ್ಷೇತ್ರದಲ್ಲಿನ ಕೆಲವರಿಗೆ ಈ ವೃದ್ಧಾಪ್ಯವೇತನವನ್ನು ನಿಲ್ಲಿಸಿದ್ದಾರೆ ಎಂದು ನನಗೂ ದೂರು ಬಂದಿದೆ. ನಾನು ಇದರ ಬಗ್ಗೆ ವಿಚಾರಣೆ ಮಾಡಿ ನೋಡಿದಾಗ ಹಿಂದೆ ಜನತಾದಳದ ಸರಕಾರವಿದ್ದಾಗ ಯಾರ್ಯಾರಿಗೆ ಈ ವೃದ್ಧಾಪ್ಯವೇತನ ದೊರಕುತ್ತಿದೆ ಅವರಿಗೆ ಕೊಡುತ್ತಿರುವುದು ಸರಿಯೇ ಅಲ್ಲವೇ ಎಂಬ ಬಗ್ಗೆ ವಿಚಾರಣೆ ಮಾಡಿದರು. ಯಾರ್ಯಾರಿಗೆ ಈ ವೃದ್ಧಾಪ್ಯ ವೇತನವನ್ನು ಕೊಡುತ್ತಿರತಕ್ಕಂಥಾದ್ದು ಏನು ಇದೆ, ಅದು ಸರಿಯಲ್ಲ ಎಂಬ ಬಗ್ಗೆ ಒಂದು ಲಿಸ್ಟ್ ಅನ್ನು ತಯಾರು ಮಾಡಿದರು. ಅದನ್ನು ತಯಾರು ಮಾಡಿದ ಮೇಲೆ ಚುನಾವಣೆ ಹತ್ತಿರ ಬಂತು, ಆಗ ಅದನ್ನು ಜಾರಿಗೆ ಕೊಡಲಿಲ್ಲ.

ಶ್ರೀ ಪಿ. ಜಿ. ಆರ್. ಸಿಂಧ್ಯ.—ನಾನು ಹೇಳುತ್ತಿರುವುದು ಏನೆಂದರೆ ನಾವು ಮಾಡಿದಂತಹ ಲಿಸ್ಟ್ ಏನು ಇದೆ ಅವರಿಗೆ ಕೊಡಬೇಕಾಗಿಲ್ಲ ಅದನ್ನು ರೆವ್ಯೂ ಮಾಡಿ ಎಂದು ನಾನು ಹೇಳುತ್ತಿದ್ದೆ. ಆದರೆ ಯಾರ್ಯಾರದ್ದು ಕ್ಯಾನ್ಸಲ್ ಆಗಿಲ್ಲ ಮತ್ತು ಯಾರ್ಯಾರು ಇದಕ್ಕೆ ಎಲಿಜಬಿಲಿಟಿ ಇದ್ದಾರೆ ಅವರಿಗೆ ಕಾಲಕ್ಕೆ ಸರಿಯಾಗಿ ಕೊಡಿ ಎಂದು ಹೇಳುತ್ತಿದ್ದೇನೆ. ಅಂತಹವರಿಗೆ ಕೂಡ ಸಮಯಕ್ಕೆ ಸರಿಯಾಗಿ ಸಿಗುತ್ತಿಲ್ಲ.

ಶ್ರೀ ಎಂ.ರಾಜಶೇಖರಮೂರ್ತಿ.—ಆ ರೀತಿಯಾಗಿಲ್ಲ. ಯಾರು ಇದಕ್ಕೆ ಅನರ್ಹರಾಗಿದ್ದಾರೆ ಎಂದು ಲಿಸ್ಟ್ ತಯಾರು ಮಾಡಿ ಕೊಟ್ಟಿದ್ದಾರೆ, ಅವರಿಗೆ ಮಾತ್ರ ಪೇಮೆಂಟ್ ಆಗುತ್ತಿಲ್ಲ.

ಶ್ರೀ ಬಿ. ಎಸ್. ಯಡಿಯೂರಪ್ಪ.—ಕಂಪ್ಯೂಟರ್ ಮೂಲಕ ಲಿಸ್ಟ್ ಅನ್ನು ಬೆಂಗಳೂರಿನಲ್ಲಿ ತಯಾರು ಮಾಡಿ ನಂತರ ಅದನ್ನು ತಾಲ್ಲೂಕುಗಳಿಗೆ ಕಳಿಸುತ್ತಿದ್ದೀರಿ. ಅದು ಬರುವುದು ೨-೩ ತಿಂಗಳಂ ನಿಧಾನವಾಗುತ್ತದೆ. ಹೀಗಾಗಿ ಮೂರು ತಿಂಗಳಾದರೂ ಕೂಡ ವೃದ್ಧಾಪ್ಯವೇತನ, ವಿಧವಾವೇತನ ಸಿಗುತ್ತಿಲ್ಲ. ತಾಲ್ಲೂಕು ಕೇಂದ್ರದಲ್ಲಿ ಇಂತಿಂತಹವರಿಗೆ ಕೊಡಬೇಕೆಂಬ ಬಗ್ಗೆ ಕೂಡ ಲಿಸ್ಟ್ ಇರುತ್ತದೆ ಅದನ್ನು ನೋಡಿಕೊಂಡು ಅಲ್ಲಿ ನೇರವಾಗಿ ಕೊಡಬಹುದಲ್ಲವೇ ? ನನಗನ್ನಿಸಿದ ಮಟ್ಟಿಗೆ ಹೇಳುವುದಾದರೆ ಈ ಸಿಸ್ಟಂ ಅನ್ನು ಬದಲಾವಣೆ ಮಾಡಿದರೆ ಅನುಕೂಲವಾಗಂತ್ತದೆ. ತಿಂಗಳಿಗೆ ಆತನಿಗೆ ಬರುವ ೫೦ ರೂಪಾಯಿ ಬರುತ್ತಿಲ್ಲ. ಈ ಸಿಸ್ಟಂನಲ್ಲಿ ಏನಾದರೂ ತೊಂದರೆಯಿರಬಹುದು ಎಂದು ನನಗನ್ನಿಸುತ್ತದೆ.

ಶ್ರೀ ಎಂ. ರಾಜಶೇಖರಮೂರ್ತಿ.—ಈ ಸಿಸ್ಟಂ ಅನ್ನು ಬದಲಾವಣೆ ಮಾಡಬೇಕೆಂದು ತಾವು ಹೇಳುತ್ತಿದ್ದೀರಿ, ಈ ವೃದ್ಧಾಪ್ಯವೇತನ ಕೆಲವರಿಗೆ ಬರುತ್ತಿಲ್ಲ ಎಂದು ಅವರು ಹೇಳುತ್ತಿದ್ದಾರೆ. ಅವರಿಗೆ ಸಕಾಲದಲ್ಲಿ ತಲುಪುವ ಬಗ್ಗೆ ವ್ಯವಸ್ಥೆ ಮಾಡುತ್ತೇನೆ, ಹಿಂದೆ ಏನು ಆಗಿದೆ ಅದನ್ನು ಜಾರಿಗೆ ಕೊಟ್ಟದ್ದು ನಮ್ಮ ಸರಕಾರವಲ್ಲ, ಹಿಂದಿನ ಸರಕಾರ ಜಾರಿಗೆ ಕೊಟ್ಟಿತ್ತು. ಇನ್ನು ಹಸಿರು ಕಾರ್ಡಿನಲ್ಲಿ ೫ ಕೆಜಿ ಅಕ್ಕಿ, ೫ ಕೆಜಿ ಗೋಧಿ ಏನು ಕೊಡುತ್ತಿದ್ದಾರೆ ಇದು ಸರಿಯಾಗಿ ತಲುಪುತ್ತಿಲ್ಲ, ಸರ್ಕಾರದ ಡಿಪೋಗಳಿಂದ ಮತ್ತು ಸಹಕಾರಿ ಸಂಸ್ಥೆಗಳಿಂದ ಕೊಡುವುದನ್ನು ತಪ್ಪಿಸಿ ಕೆಲವು ಖಾಸಗಿ ವ್ಯಕ್ತಿಗಳಿಗೆ ಈ ಕೆಲಸ ವಹಿಸಿದ್ದಾರೆಂದು ಹೇಳಿದರು. ಜಿಲ್ಲಾ ಪರಿಷತ್ತಿನವರಿಗೆ ಈಗ ಅಧಿಕಾರ ಇದೆ. ಹಿಂದೆ ಡಿ.ಸಿ. ಯವರಿಗೆ ಅಧಿಕಾರ ಇತ್ತು. ಈಗ ಕೆಲವರಿಗೆ ಇಂಡೆಂವಿಜ್ಯುಯಲ್ ಆಗಿ ಡಿಪೋಗಳನ್ನು ರನ್ ಮಾಡುವುದಕ್ಕೆ ಅವಕಾಶ ಮಾಡಿಕೊಟ್ಟಿದ್ದಾರೆ. ಈ ಡಿಪೋಗಳನ್ನು ರನ್ ಮಾಡುತ್ತಿರುವವರು ಯಾರಿದ್ದಾರೆ ಅವರು ಹಸಿರು ಕಾರ್ಡ್‌ನಲ್ಲಿ ಇರತಕ್ಕೆ ಅಕ್ಕಿ, ರಾಗಿ, ಗೋಧಿಗಳನ್ನು ಪೂರ್ಣ ಪ್ರಮಾಣದಲ್ಲಿ ಕಾರ್ಡುದಾರರಿಗೆ ಕೊಡುತ್ತಿಲ್ಲ. ಅವರಿಗೆ ಸ್ವಲ್ಪ ಭಾಗವನ್ನು ಕೊಟ್ಟು ಉಳಿದುದನ್ನು ಬ್ಲಾಕ್ ಮಾರ್ಕೆಟ್‌ನಲ್ಲಿ ಮಾರಿ ಕೊಳ್ಳುತ್ತಿದ್ದಾರೆಂದು ನಮಗೆ ದೂರುಗಳು ಬಂದಿವೆ. ಈ ಡಿಪೋಗಳನ್ನು ಯಾರ್ಯಾರು ರನ್ ಮಾಡುತ್ತಿದ್ದಾರೆ ಅವರೆಲ್ಲರೂ ನಮ್ಮ ಪಕ್ಷದವರಲ್ಲ. ಅವರೆಲ್ಲರೂ ಆವರ ಪಕ್ಷಕ್ಕೆ ಸೇರಿದವರು...

ಶ್ರೀ ಪಿ. ಜಿ. ಆರ್. ಸಿಂಧ್ಯ —ಸ್ವಾಮಿ, ಇಲ್ಲಿ ಪಕ್ಷದ ಪ್ರಶ್ನೆಯನ್ನು ನೀವು ಏತಕ್ಕೆ ತರುತ್ತಿದ್ದೀರಿ? ನಾನು ಪಕ್ಷದ ಪ್ರಶ್ನೆಯನ್ನೇನಾದರೂ ಎತ್ತಿದೆನೆ ? ಹಾಗಾದರೆ ಈ ಡಿಪೋಗಳನ್ನು ನಡೆಸುತ್ತಿರುವವರ ಪೈಕಿ ಇವರ ಪಕ್ಷದವರು ಇಲ್ಲವೆ? ಇಲ್ಲಿ ರಾಜಕೀಯವನ್ನು ಇವರು ಏತಕ್ಕೆ ತರಬೇಕು? ನಾನು ಇಲ್ಲಿ ಅನೇಕ ವಿಚಾರಗಳನ್ನು ಹೇಳುವಾಗಲೆಲ್ಲಾ ಸಾಮ್ಯನಿರ್ವರೂ ಇವರು ನಮ್ಮನ್ನು ಚೆಚ್ಚಿಚ ಚ್ಚಿ ಮಾತನಾಡಂತೆ ಮಾಡುತ್ತಿದ್ದಾರೆ. ಯಾ ಸೌಕ್ಷ್ಯಲಿಯವರೂ ಕೂಡ ಕಾರ್ಡ ದಾರರಿಗೆ ಪೂರ್ಣ ಪ್ರಮಾಣದಲ್ಲಿ ಕೊಡದೇ ಸ್ವಲ್ಪ ಭಾಗವನ್ನು ಕೊಟ್ಟು ಉಳಿದವನ್ನು ಬಹಿರಂಗ ಮಾರಾಟ ಮಾಡಿಕೊಳ್ಳುತ್ತಾರೆ ಇದು ಎಲ್ಲರಿಗೂ ಗೊತ್ತಿರತಕ್ಕ ವಿಚಾರ. ಆದು ಮಂತ್ರಿಗಳು ಇಲ್ಲಿ ಉತ್ತರ ಹೇಳುವಾಗ ಪ ಕಿರೊಂದರಲ್ಲೂ ರಾಜಕೀಯವನ್ನು ಮಿಕ್ಸ್ ಪಾಡಿ ಮಾತನಾಡುತ್ತಿದ್ದಾರೆ. ಮಾನ್ಯ ರಾಮಕೃಷ್ಣ ಹೆಗಡೆಯವರು ಮುಖ್ಯ ಮಂತ್ರಿ ಗಳಾಗಿದ್ದಾಗ, ಮಾನ್ಯ ಬೊಮ್ಮಾಯಿಯವರು ಮುಖ್ಯಮಂತ್ರಿಯಾಗಿದ್ದಾಗ ಈ ಬಗ್ಗೆ ದೂರುಗಳು

ಬಂದಿವೆ. ನಿಜವಾಗಿ ಯಾರು ಗ್ರೀನ್ ಕಾರ್ಡನ್ನು ಪಡೆಯುವುದಕ್ಕೆ ಅರ್ಹರೋ ಅವರಿಗೆ ಸಿಕ್ಕದೆ ಅನರ್ಹರಿಗೆ ಸಿಕ್ಕಿವೆ, ಎಲಿಜಿಬಲಿಟಿ ಇಲ್ಲದಿರುವವರೂ ರೇಷನನ್ನು ಪಡೆಯುತ್ತಿದ್ದಾರೆ, ಇದನ್ನು ಪತ್ತೆಹಚ್ಚಿ ಎಂದು ಹೇಳಿದ್ದಾರೆ. ನಾನು ಹೇಳುತ್ತಿರುವುದು ಲಿಸ್ಟ್‌ನ ಬಗ್ಗೆ ಅಲ್ಲ ಯಾರಿಂ ಬೆನಿಫಿಷಿಯರೀಸ್ ಇರುತ್ತಾರೆ ಅವರಿಗೆ ನಾವು ಕೊಡತಕ್ಕ ಸೌಲಭ್ಯ ಸಿಕ್ಕುತ್ತಿಲ್ಲ. ಅದನ್ನು ಅವರಿಗೆ ತಲುಪಿಸುವ ಕೆಲಸ ಆಗಬೇಕು. ನಾವಂತೂ ಮಾಡುವುದಕ್ಕಾಗಲಿಲ್ಲ. ಈಗ ನೀವು ಅಧಿಕಾರಕ್ಕೆ ಬಂದಿದ್ದೀರಿ. ನೀವಾದರೂ ಮಾಡಿ ಎಂದು ನಾವು ಹೇಳುತ್ತಿದ್ದೇವೆ. ಹಸಿರು ಕಾರ್ಡ್‌ನಲ್ಲಿ ಕೊಡಬೇಕಾದ ರೇಷನ್ ಎಲ್ಲವನ್ನೂ ಅವರು ಪೂರ್ತಿ ಕೊಡದೆ ಸ್ವಲ್ಪ ಕೊಟ್ಟು ಉಳಿದುದನ್ನು ಕಳ್ಳತನದಲ್ಲಿ ಆ ಸೊಸೈಟಿಯವರೂ ಮಾರಿಕೊಳ್ಳುತ್ತಿದ್ದಾರೆ. ನಾನು ತಮ್ಮನ್ನು ಕೇಳುತ್ತಿರುವುದು ಏನೆಂದರೆ, ಗ್ರೀನ್ ಕಾರ್ಡ್‌ನವರಿಗೆ ೫ ಕೆಜಿ ಅಂತ ಇದೆ. ಇದರ ಪ್ರಮಾಣವನ್ನು ಕೇಂದ್ರ ಸರ್ಕಾರದವರೂ ಹೆಚ್ಚು ಮಾಡಿದ್ದಾರೆಯೇ ? ಅಥವಾ ಕಡಿಮೆ ಮಾಡಿದ್ದಾರೆಯೇ? ಎಂದು ನಾನು ಕೇಳಿದರೆ ಅದಕ್ಕೆ ನೀವು ರಾಜಕೀಯವನ್ನು ಬೆರೆಸುವುದಕ್ಕೆ ಹೋಗುತ್ತಿದ್ದೀರಿ. ಇದು ಸರಿಯಲ್ಲ.

ಶ್ರೀ ಎಂ. ರಾಜಶೇಖರ ಮೂರ್ತಿ.—ಇನ್ನು ಟ್ರೆಜರಿ ಪೇಮೆಂಟ್‌ನಲ್ಲಿ ಕರಪ್ಷನ್ ಜಾಸ್ತಿಯಾಗಿದೆ ಎಂದು ಕೆಲವು ಮಾನ್ಯ ಸದಸ್ಯರು ಹೇಳಿದರು. ಯಾರಾದರೂ ಟ್ರೆಜರಿಯಲ್ಲಿ ಹಣವನ್ನು ಪಡೆಯಬೇಕಾದರೆ ಅದಕ್ಕೆ ಲಂಚವನ್ನು ಕೊಡಬೇಕಾಗುತ್ತದೆ ಎಂದು ಹೇಳಿದರು. ಇದಕ್ಕೆ ನಾನಾದರೂ ಹೇಳಂತ್ತೇನೆ. ನಾವು ಅಧಿಕಾರಕ್ಕೆ ಬರುವುದಕ್ಕೆ ಮುಂಚೆಯಿಂದಲೂ ಇದು ನಡೆಯುತ್ತಿತ್ತು. ಕೆಲವರಿಗೆ ಓರಲ್ ಇನ್‌ಸ್ಟ್ರಕ್ಷನ್ಸ್ ಕೊಡುತ್ತಿದ್ದರು. ಇಂಥಿಂಥಾದ್ದಕ್ಕೆ ಪೇಮೆಂಟ್ ಮಾಡಿ ಇಂಥಿಂಥಾದ್ದಕ್ಕೆ ಬೇಡ ಅಂತ. There was a kind of control over the payment in Treasury by oral instructions, ಈ ದೂರುಗಳು ಬಂದಮೇಲೆ ನಾವು ೩ಳಿ ಐಟಂಗಳನ್ನು ಸೇರಿಸಿ ಒಂದು ಲಿಸ್ಟ್ ಮಾಡಿ ಈ ಐಟಂಗಳಿಗೆ ಪೇಮೆಂಟ್ ಮಾಡುವುದರಲ್ಲಿ ಯಾವ ನಿರ್ಬಂಧವೂ ಇಲ್ಲ, ನೀವು ಯಾವುದೇ ತಕರಾರನ್ನು ಹಾಕದೆ ಪೇಮೆಂಟ್ ಮಾಡಬಹುದು ಎಂದು ಇನ್‌ಸ್ಟ್ರಕ್ಷನ್ಸ್‌ನ್ನು ಕೊಟ್ಟಿದ್ದೇವೆ. ಆದರೆ ಹೆವಿ ಪೇಮೆಂಟ್ ಯಾವುದು ಬರುತ್ತದೆ ಅದನ್ನು ಸ್ವಲ್ಪ ಪರಿಶೀಲಿಸಿನೋಡಿ ಎಂದು ಹೇಳಿದ್ದೇವೆ. ಇದರಲ್ಲಿ ಏನು ಲಂಚ ನಡೆಯುತ್ತಿದೆ ಎಂದು ಮಾನ್ಯ ಸದಸ್ಯರು ಹೇಳುತ್ತಿದ್ದಾರೆ ಅದರ ಬಗ್ಗೆ ನಾವು ಈಗಾಗಲೇ ಕ್ರಮ ತೆಗೆದುಕೊಂಡಿದ್ದೇವೆ.

ಶ್ರೀ ಬಿ. ಎಸ್. ಯಡಿಯೂರಪ್ಪ.—ನಿಮ್ಮ ೩ಳಿ ಐಟಂಗಳಲ್ಲಿ ಸರ್ಕಾರೀ ನೌಕರರಿಗೆ ಸಂಬಳ ಕೊಡುವುದು, ಟಿ.ಎ. ಡಿ.ಎ. ಕೊಡುವುದು ಮಾತ್ರ ಇದೆಯೋ ಅಥವಾ ಅದರಲ್ಲಿ ಅಭಿವೃದ್ಧಿ ಕಾರ್ಯಗಳದ್ದೂ ಸೇರಿದೆಯೋ ?

ಶ್ರೀ ಎಂ. ರಾಜಶೇಖರ ಮೂರ್ತಿ.—ನೀವು ಯಾವುದಾದರೂ ನಿರ್ದಿಷ್ಟವಾದ ವಿಚಾರವನ್ನು ಕೇಳಿದರೆ ಅದಂ ಆ ೩ಳಿ ಐಟಂಗಳಲ್ಲಿ ಬರುತ್ತದೆಯೇ, ಇಲ್ಲವೇ ಎಂಬುದನ್ನು ಹೇಳಬಹುದು, ವೀಕರ್ ಸೆಕ್ಷನ್ಸ್‌ಗೆ, ಸ್ಕೂಲುಗಳಿಗೆ ಕೊಡಬೇಕೆಂದು ತಿಳಿಸಿದ್ದೇವೆ.

ಶ್ರೀ ಬಿ. ಎಸ್. ಯಡಿಯೂರಪ್ಪ.—ನಿನ್ನೆ ನನ್ನ ಕ್ಷೇತ್ರಕ್ಕೆ ಹೋಗಿಬಂದೆ. ಅಲ್ಲಿ ಕೆಲವು ಇಲಾಖೆಯ ಅಧಿಕಾರಿಗಳನ್ನು ಕೇಳಿದಾಗ ಸುಮಾರು ೨-೩ ತಿಂಗಳಿಂದ ಅಭಿವೃದ್ಧಿ ಕಾರ್ಯಗಳಿಗೆ ಹಣ ಬಿಡುಗಡೆ ಆಗಿಲ್ಲವಾದ್ದರಿಂದ ನಾವು ಏನೂ ಕೆಲಸ ಮಾಡುವುದಕ್ಕಾಗುತ್ತಿಲ್ಲವೆಂದು ಹೇಳಿದರು. ಪಿ ಡಬ್ಲ್ಯೂ.ಡಿ. ಮತ್ತು ಇರಿಗೇಷನ್ ಡಿಪಾರ್ಟ್‌ಮೆಂಟ್‌ನಲ್ಲಿ ಹಗಲೂರಾತ್ರಿ (ಮಾರ್ಚ್ ತಿಂಗಳ ಕೊನೆಯಲ್ಲಿ) ಕೆಲಸ ನಡೆಯುವುದಂ ಎಲ್ಲರಿಗೂ ಗೊತ್ತಿದೆ. ಇದಕ್ಕೆ ಕಾರಣ ತಡವಾಗಿ ಹಣ ಬಿಡುಗಡೆ ಮಾಡುವುದು.

ಶ್ರೀ ಆರ್. ವಿ. ದೇಶಪಾಂಡೆ.—ನಾನು ಮೊನ್ನೆ ಮಾತನಾಡುವಾಗ ಪ್ಲಾನ್ಡ್ ಮತ್ತು ನಾನ್ ಪ್ಲಾನ್ಡ್ ವರ್ಕ್ಸ್‌ಗೆ ಜಿಲ್ಲಾ ಪರಿಷತ್ತಿನಿಂದ ಹಣ ಬಿಡುಗಡೆ ಆಗುತ್ತಿಲ್ಲ ಎಂದು ಹೇಳಿದ್ದೇನೆ.

೪-೩೦ ಪಿ.ಎಂ.

ಶ್ರೀ ಎಂ. ರಾಜಶೇಖರಮೂರ್ತಿ.—ಮಾನ್ಯ ಸದಸ್ಯರಂ ಕೇಳುತ್ತಿರುವುದು ಡೆವಲಪ್‌ಮೆಂಟ್‌ಲ ವರ್ಕ್ಸ್‌ಗೆ ಹಣ ಖರ್ಚು ಮಾಡುತ್ತಿದ್ದೀರಾ ಎಂದು. ಪ್ಲಾನ್ ಎಕ್ಸ್‌ಪೆಂಡೀಚರ್ ಏನು ಇದೆ ಇದರಲ್ಲಿ ಡೆವಲಪ್‌ಮೆಂಟ್ ವರ್ಕ್ಸ್ ಕೂಡ ಸೇರಿದೆ. ಈಗ ತಾವು ಪಿ.ಡಬ್ಲ್ಯೂ.ಡಿ. ಇಲಾಖೆಯಿಂದ ಹಣ ಕಾಸು ಸಿಗುತ್ತಿಲ್ಲವೆಂದು ಹೇಳಿದ್ದಿರಿ ಅದಕ್ಕೂ ಇದಕ್ಕೂ ಸಂಬಂಧವಿಲ್ಲ. ಗೌವರ್ನ್‌ಮೆಂಟ್ ಎಲ್.ಓ.ಸಿ. ಕೊಟ್ಟರೆ ಹಣ ಕೊಡುತ್ತಾರೆ. ಎಲ್.ಓ.ಸಿ. ಕೊಡಬೇಕಾದರೂ ಪರಿಶೀಲನೆ ಮಾಡಬೇಕಾಗುತ್ತದೆ. ಕೆಲವು ಕಡೆ ಏನು ಮಾಡುತ್ತಾರೆಂದರೆ, ವರ್ಷದ ಕೊನೆಯಲ್ಲಿ ಕೊಟ್ಟರೆ ಎಲ್.ಓ.ಸಿ. ಸರಿಯಾಗಿ ಉಪಯೋಗವಾಗುವದಿಲ್ಲ. ಆದರಲ್ಲಿ ಮಾಲ್‌ಪ್ರಾಕ್ಟೀಸ್‌ಗೆ ಅವಕಾಶವಾಗುತ್ತದೆಂದು ಬಹಳ ಎಚ್ಚರಿಕೆಯಿಂದ ಹಣ ಬಿಡುಗಡೆ ಮಾಡುತ್ತಿದ್ದೇವೆ.

ಶ್ರೀ ಬಿ. ಎಸ್. ಯಡಿಯೂರಪ್ಪ.—ಮಾರ್ಚ್ ಕೊನೆ ತಿಗುತ್ತಿರುವುದರಿಂದ ದುಡ್ಡು ಮಾಡಿ ಕೊಂಡು ಹೋಗುತ್ತಿರುವುದು ಅವಿರತವಾಗಿ ನಡೆಯುತ್ತಿದೆ. ಹೀಗಾಗದಿರಲು ಸರ್ಕಾರದವರು ಕೆಲವೊಂದು ಬಿಗಿಯಾದ ಕ್ರಮವನ್ನು ತೆಗೆದುಕೊಂಡಿರುವುದಕ್ಕೆ ನಾನು ಧನ್ಯವಾದಗಳನ್ನು ಅರ್ಪಿಸುತ್ತೇನೆ. ನಾನು ಈಗ ಹೇಳುತ್ತಿರುವುದೇನೆಂದರೆ, ಕಳೆದ ೩–೪ ವರ್ಷಗಳಿಂದ ಪಿ.ಡಬ್ಲ್ಯೂ.ಡಿ.ಯಲ್ಲಿ ಕೆಲಸಮಾಡಿರ ತಕ್ಕಂಥ ಕಂಟ್ರಾಕ್ಟದಾರರಿಗೆ ಪೇಮೆಂಟ್ ಆಗದೆ ಕೆಲಸ ಸ್ಥಗಿತವಾಗಿದೆ. ಎಲ್.ಓ.ಸಿ. ಬಡುಗಡೆಯಾಗಿಲ್ಲ. ಎಲ್.ಓ.ಸಿ. ಬಿಡುಗಡೆಯಾಗಿದ್ದರೂ ಕ್ಲಿಯರೆನ್ಸ್ ಸಿಕ್ಕಿಲ್ಲವಾದ್ದರಿಂದ ಇಂಥ ಒಂದು ಪರಿಸ್ಥಿತಿ ಉದ್ಭವ ವಾಗಿದೆ. ಎಲ್ಲ ಬಿಲ್‌ಗಳು ಪೆಂಡಿಂಗ್ ಇವೆ. ೩–೪ ತಿಂಗಳ ಹಿಂದೆ ಮಾಡಿರತಕ್ಕಂಥ ಬಿಲ್‌ಗಳಿಗೂ ಒಂದೆರಡು ತಿಂಗಳಾದರೂ ಪೇಮೆಂಟ್ ಆಗಿಲ್ಲ ದುಡ್ಡು ಇಲ್ಲದೆ ಅಭಿವೃದ್ಧಿ ಕೆಲಸಗಳು ಕಡಿಮೆ ಯಾಗಿದೆ.

ಶ್ರೀ ಎಂ. ರಾಜಶೇಖರಮೂರ್ತಿ.—ಹಿಂದೆ ಎಷ್ಟು ಪೆಂಡಿಂಗ್ ಬಿಲ್ಸ್‌ಗಳು ಇದ್ದವು ಎಂದರೆ ಕಳೆದ ವರ್ಷದ್ದು ೧೨೦ ಕೋಟಿ ರೂಪಾಯಿಗಳು. ಅದಕ್ಕೆ ಹಿಂದೆ ಸ್ವಲ್ಪ ಹೆಚ್ಚು ಕಡಿಮೆ ೧೦೦ ಕೋಟಿಯಿಂದ ೫೦ ಕೋಟಿವರೆಗೆ ಇತ್ತು. ಇವತ್ತು ನಮ್ಮ ಪೆಂಡಿಂಗ್ ಬಿಲ್‌ಗಳು ಎಂದರೆ ೮ ಕೋಟಿ ಮಾತ್ರ. ನಿನ್ನೆಯವರೆಗೆ ಎಲ್.ಓ.ಸಿ. ಬಿಡುಗಡೆ ಮಾಡಿದ್ದೇವೆ. ನನಗೆ ತಿಳಿದು ಬಂದಹಾಗೆ ಎಲ್.ಓ.ಸಿ. ತೆಗೆದು ಕೊಂಡುಹೋದರೂ ಜನರಲ್ ಟ್ರಾನ್ಸ್‌ಫರ್ ಆದಾಗ ಎಲ್ಲ ಇಂಜಿನೀಯರುಗಳು ಮನೆಗಳಿಗೆ ಹೋಗು ತ್ತಾರೆ. ಎಲ್.ಓ.ಸಿ. ತೆಗೆದುಕೊಂಡು ಹೋದಮೇಲೆ ಪೇಮೆಂಟ್ ಮಾಡಬೇಕಲ್ಲ. ಅದಕ್ಕೆ ದುಡ್ಡು ತೆಗೆದುಕೊಂಡು ಪೇಮೆಂಟ್ ಮಾಡುತ್ತಿದ್ದಾರೆ. ಈ ಮಾಲ್‌ಪ್ರಾಕ್ಟೀಸ್ ಅನ್ನು ತಪ್ಪಿಸಬೇಕೆನ್ನುವ ದೃಷ್ಟಿ ಯಿಂದ ಹಿಡಿದು ಹಾಕಿದ್ದೇವೆ.

ಶ್ರೀ ಬಿ. ಎಸ್. ಯಡಿಯೂರಪ್ಪ.—ಬಹಳ ದಿವಸಗಳ ಹಿಂದೆಯೇ ಮಾಮೂಲಿಯನ್ನು ಕೊಟ್ಟು ಬಂದಿದ್ದಾರೆ. ವಾಪಸು ಬರುವ ಇಂಜಿನೀಯರ್‌ಗಳು ಹೊಸದಾಗಿ ವಸೂಲು ಮಾಡುತ್ತಾರೆ. ತಮ್ಮಲ್ಲಿ ವಿನಂತಿ ಏನೆಂದರೆ ತಮಗೆ ಗೊತ್ತಿರುವ ಹಾಗೆ ಭ್ರಷ್ಟಾಚಾರ ತಪ್ಪಿಸುವ ಸಲುವಾಗಿ ಪ್ರಾಮಾಣಿಕ ಪ್ರಯತ್ನವನ್ನು ತಾವು ಮಾಡಿರುತ್ತೀರಿ ಈ ಬಗ್ಗೆ ಬಜೆಟ್ ಭಾಷಣಕ್ಕೆ ತಾವು ಉತ್ತರ ಕೊಡತಕ್ಕಂಥ ಸಂದರ್ಭದಲ್ಲಿ ಪ್ರಸ್ತಾಪ ಮಾಡಿರುವುದು ನಮಗೆ ಬಹಳಷ್ಟು ಸಮಾಧಾನಕರವಾಗಿದೆ. ನಿಜವಾಗಿಯೂ ನಾವು ತಿಳಿದುಕೊಂಡಿರುವಂತೆ ಈಗಾಗಲೇ ಪಿ.ಡಬ್ಲ್ಯೂ.ಡಿ. ಕಂಟ್ರಾಕ್ಟರ್ಸ್ ಕೆಲಸ ಮಾಡಿ ಮುಗಿಸಿರುತ್ತಾರೆ. ಅವರಿಗೆ ದುಡ್ಡು ಕೊಡದೆ ಬಿಲ್ಲುಗಳು ಪೆಂಡಿಂಗ್ ಇದೆ. ನನ್ನ ಭಯವೇನೆಂದರೆ ೩೧ ನೇ ತಾರೀಖು ಆದಮೇಲೆ ಇಂಜಿನೀಯರುಗಳು ತಲೆಬೋಳಿಸಿ ತಮ್ಮ ಮಾಮೂಲಿ ವಸೂಲು ಮಾಡುತ್ತಾರೆ. ನಂತರ ಹೊಸಬರು ಬಂದರೆ ಮತ್ತೆ ಅದೇರೀತಿ ಕೆಲಸ ಮಾಡುತ್ತಾರೆ. ಇದರಿಂದ ಕಂಟ್ರಾಕ್ಟರ್ ಊರನ್ನು ಬಿಡಬೇಕಾಗುತ್ತದೆ. ಆದ್ದರಿಂದ ಪೆಂಡಿಂಗ್ ಬಿಲ್‌ಗಳ ಹಣವನ್ನು ಕೊಟ್ಟು ಬಿಟ್ಟರೆ ಬಹಳ ಒಳ್ಳೆಯದೆಂದು ಹೇಳುತ್ತೇನೆ.

ಶ್ರೀ ಎಂ. ರಾಜಶೇಖರಮೂರ್ತಿ.—ದುಡ್ಡು ಇಲ್ಲದೆ ಎಲ್.ಓ.ಸಿ. ತಡೆಹಿಡಿದಿಲ್ಲ. ಮಾಲ್ ಪ್ರಾಕ್ಟೀಸ್ ತಪ್ಪಿಸಬೇಕೆಂಬ ದೃಷ್ಟಿಯಿಂದ ಈ ರೀತಿ ಮಾಡಲಾಗಿದೆ. ಜಿನಿಯನ್ ಕೇಸ್ ಯಾವುದಾದರೂ ೧–೨ ಇದ್ದರೆ ಮಾನ್ಯ ಸದಸ್ಯರು ಹೇಳಿದರೆ, ಅದಕ್ಕೆ ಹಣ ಬಿಡುಗಡೆ ಮಾಡುವುದಕ್ಕೆ ತಯಾರಾಗಿದ್ದೇವೆ.

ಶ್ರೀ ಆರ್. ಎಲ್. ಜಾಲಪ್ಪ.—ಮಾನ್ಯ ಸಚಿವರು ೮ ಕೋಟಿ ರೂಪಾಯಿಗಳು ಮಾತ್ರ ಬಾಕಿ ಇದೆ ಎಂದು ಹೇಳಿದರು. ಈಗ ತಾಲ್ಲೂಕ್ ಮಾರ್ಕೆಟಿಂಗ್ ಸೊಸೈಟಿಗಳು ಏನಿವೆ ಅವುಗಳಿಗೆ ಒಂದೊಂದು ಸೊಸೈಟಿಗೆ ೮–೧೦ ಲಕ್ಷ ರೂಪಾಯಿಗಳಷ್ಟು ಸಬ್‌ಸಿಡಿ ಹಣವನ್ನು ಕೊಡಬೇಕಾಗಿದೆ. ಸಬ್‌ಸಿಡಿ ಆಕ್ಕಿಯನ್ನು ಫುಡ್ ಕಾರ್ಪೊರೇಷನ್‌ನಿಂದ ಪೂರ್ಣವಾಗಿ ತೆಗೆದುಕೊಂಡು ಹಾಗೂ ಕಟ್ಟಿಯಾದಮೇಲೆ ಬಿಲ್ ಪ್ರಿಪೇರ್ ಮಾಡಿ ಕೊಡುತ್ತಾರೆ. ಹೀಗೆ ಒಂದೊಂದು ತಾಲ್ಲೂಕಿನವರೆಗೂ ೮–೧೦ ಲಕ್ಷ ರೂಪಾಯಿಗಳನ್ನು ಕೊಡಬೇಕಾಗಿದೆ. ಈ ಎಂಟು ಹತ್ತು ಲಕ್ಷ ರೂಪಾಯಿಗಳನ್ನು ಕೊಡಲು ಜಿಲ್ಲಾ ಬ್ಯಾಂಕ್‌ಗಳಿಂದ ಸಾಲ ಮಾಡುತ್ತಾರೆ. ಅವರಿಗೆ ೧೨–೧೪ ಪರ್ಸೆಂಟ್ ಇಂಟರೆಸ್ಟ್ ಕೊಡಬೇಕಾಗುತ್ತದೆ. ಆದ್ದರಿಂದ ದಯ ವಿಟ್ಟು ಬೇರೆ ಬಿಲ್‌ಗಳನ್ನಾದರೂ ನಿಲ್ಲಿಸಿ ಸಹಕಾರಿ ಸಂಘಗಳಿಗೆ ಹಣವನ್ನು ಕೊಡುವ ವ್ಯವಸ್ಥೆಯನ್ನು ಮಾಡಬೇಕೆಂದು ಕೇಳುತ್ತೇನೆ.

ಶ್ರೀ ಎಂ. ರಾಜಶೇಖರಮೂರ್ತಿ.—ಜಿನಿಯನ್ ಗ್ರೀವೆನ್ಸ್ ಇದ್ದು ನನ್ನ ಗಮನಕ್ಕೆ ತಂದರೆ ಕೊಡುತ್ತೇನೆ. ನಮ್ಮ ಜಿಲ್ಲೆಯಿಂದಲೂ ಬಹಳವಾಗಿ ಒತ್ತಾಯ ಬಂದಿದೆ. ಫುಡ್ ಡಿಪಾರ್ಟ್‌ಮೆಂಟಿಗೆ ಸರ್ಕಾರದವರು ಸಬ್‌ಸಿಡಿಯಾಗಿ ವರ್ಷಕ್ಕೆ ಕೊಡತಕ್ಕಂಥದ್ದು ೪೪ ಕೋಟಿ ರೂಪಾಯಿಗಳು. ಈ ೪೪ ಕೋಟಿ ರೂಪಾಯಿಗಳಲ್ಲಿ ಸ್ವಲ್ಪ ಭಾಗ ಬಿಡುಗಡೆ ಮಾಡಿದ್ದೇವೆ, ಇನ್ನು ಸ್ವಲ್ಪ ಭಾಗ ಮಾತ್ರ ಬಿಡುಗಡೆ ಮಾಡಬೇಕಾಗಿದೆ. ತಾಲ್ಲೂಕು ಮಾರ್ಕೆಂಟಿಂಗ್ ಕೋಆಪರೇಟೀವ್ ಸೊಸೈಟಿಯವರು ಮಾರ್ಕೆಟ್‌ನಲ್ಲಿ ಸೀಸನ್ ಬಂದಾಗ ಪ್ರೊಕ್ಯೂರ್‌ಮೆಂಟ್ ಮಾಡುವುದಕ್ಕೆ ಅನುಕೂಲ ವಾಗುತ್ತದೆ. ಹಣಕಾಸು ಇಲ್ಲದೆ

ಪ್ರೊಕ್ಯೂರ್‌ಮೆಂಟ್ ಮಾಡಬೇಕೆಂದರೆ ಬಹಳ ಕಷ್ಟವಾಗುತ್ತದೆ. ಇದರ ಬಗ್ಗೆ ಇಲಾಖೆಯವರ ಜೊತೆಯಲ್ಲಿ ಚರ್ಚೆ ಮಾಡಿದ್ದೇನೆ ಈಗ ಅವರು ಸ್ವಲ್ಪ ಮಟ್ಟಿಗೆ ಸಾಲ ಮಾಡಿಕೊಂಡಿದ್ದಾರೆ. ಹಣಕಾಸು ಇಲ್ಲದೆ ಪ್ರೊಕ್ಯೂರ್‌ಮೆಂಟಿಗೆ ಹೋಗಬೇಕೆಂದರೆ ಕಷ್ಟವಾಗುತ್ತದೆ ಈ ಬಗ್ಗೆ ಇಲಾಖೆಯವರ ಜೊತೆ ಚರ್ಚೆ ಮಾಡಿದ್ದೇನೆ. ಇದರ ಬಗ್ಗೆ ಸೂಕ್ತ ಕ್ರಮ ತೆಗೆದುಕೊಳ್ಳುತ್ತೇನೆ.

ಶ್ರೀ ಆರ್. ಎಲ್. ಜಾಲಪ್ಪ.—ಪ್ರೊಕ್ಯೂರ್‌ಮೆಂಟಿಗೆ ಸಬ್ಸಿಡಿ ಕೊಡಬೇಕಾದುದಲ್ಲ, ಫುಡ್ ಕಾರ್ಪೊರೇಷನ್‌ನಿಂದ ಏನು ಆಕ್ಕಿ, ಗೋಧಿ ಕೊಂಡುಕೊಂಡು ಬರುತ್ತಾರೆ. ಅದಕ್ಕೆ ಸಬ್ಸಿಡಿಯನ್ನು ಕ್ಲೈಂ ಮಾಡಬೇಕಾಗುತ್ತದೆ. ಹಸಿರು ಮತ್ತು ಹಳದಿ ಕಾರ್ಡುಗಳ ಬಗ್ಗೆ ಕೂಡ ವಿಚಾರ ಮಾಡ ಬೇಕಾಗುತ್ತದೆ. ನಾವು ಈಗತಾನೇ ಹೊಸದಾಗಿ ಅಧಿಕಾರ ಸ್ವೀಕಾರ ಮಾಡಿರುವುದರಿಂದ ಇದನ್ನೆಲ್ಲ ಸ್ಟಡಿ ಮಾಡಿ ನಂತರ ಹೇಳಿ. ೮-೧೦ ದಿನಗಳಲ್ಲೇ ಎಲ್ಲವನ್ನು ಅರ್ಥ ಮಾಡಿಕೊಳ್ಳಿ ಎಂದು ನಾನು ಹೇಳುವುದಿಲ್ಲ. ೫ ಕೆ.ಜಿ. ಏತಕ್ಕೆ ಕೊಡುತ್ತೀರಿ, ೧೦ ಕೆ.ಜಿ. ಕೊಟ್ಟರೆ ಸಬ್ಸಿಡಿ ಪೋರ್ಷನ್ ಜಾಸ್ತಿಯಾಗು ತ್ತದೆ. ಪಟ್ಟಣಗಳಲ್ಲಿ ಸಬ್ಸಿಡಿ ಪೋರ್ಷನ್ ಕಡಿಮೆ ಇದೆ. ಗ್ರೀನ್ ಕಾರ್ಡ್‌ಸ್‌ಗೆ ಕೊಡುವುದರಿಂದ ಸಬ್ಸಿಡಿ ಜಾಸ್ತಿಯಾಗುತ್ತದೆ. ಇಷ್ಟೆಲ್ಲ ಬುದ್ಧಿವಂತಿಕೆಯಿಂದ ಮಾಡಿದ್ದೀರಿ, ಬುದ್ಧಿವಂತಿಕೆ ಮಾಡಿಕೊಳ್ಳಿ, ಬೇಡ ಅನ್ನುವುದಿಲ್ಲ. ಟಿಎಪಿಸಿಎಂಎಸ್.ಗೆ ಬೇಗ ಹಣ ರಿಲೀಸ್ ಮಾಡಿ.

ಶ್ರೀ ಎಂ. ರಾಜಶೇಖರಮೂರ್ತಿ.—ಸಕ್ಸಿಮೆಂಟರಿ ಗ್ಯಾರಂಟ್‌ನಲ್ಲಿ ೮.೫ ಕೋಟಿ ರೂಪಾಯಿಗಳನ್ನು ಇಟ್ಟಿದ್ದೇವೆ ಅದನ್ನು ಬಿಡುಗಡೆ ಮಾಡುತ್ತೇವೆ.

ಒಬ್ಬ ಮಾನ್ಯ ಸದಸ್ಯರು.—ಕಳೆದ ಮೂರು ತಿಂಗಳುಗಳಿಂದ ರೈತರಿಗೆ ಎಲ್.ಓ.ಸಿ. ಬಿಡುಗಡೆ ಮಾಡುತ್ತಿಲ್ಲ. ಸರ್ಕಾರದಿಂದ ಹಣ ಬಿಡುಗಡೆ ಮಾಡಿಲ್ಲ ಅನ್ನುತ್ತಾರೆ. ಇದರಿಂದ ರೈತರಿಗೆ ತೊಂದರೆ ಯಾಗಿದೆ. ಮುಂಗಡಪತ್ರದ ರೈತರಿಗೆ ಕಳೆದ ಮೂರು ತಿಂಗಳಿಂದ ಪರಿಹಾರ ದೊರೆತಿಲ್ಲ.

SRI M. RAJASHEKHARA MURTHY.—If he gives representation, certainly I will consider.

ಅಧ್ಯಕ್ಷರು.—ನಾನು ಪ್ರಸ್ತಾಪವನ್ನು ಸಭೆಯ ಮತಕ್ಕೆ ಹಾಕುತ್ತೇನೆ. ಪ್ರಸ್ತಾವವೇನೆಂದರೆ,

"೧೯೮೯-೯೦ನೇ ಸಾಲಿನ ಅನುಪೂರಕ ಅಂದಾಜುಗಳಿಗೆ ಸಂಬಂಧಿಸಿದ ಬೇಡಿಕೆಗಳನ್ನು ಮಂಜೂರು ಮಾಡುವುದು"

ಪ್ರಸ್ತಾವವು ಅಂಗೀಕಾರವಾಯಿತು ಮತ್ತು ಬೇಡಿಕೆಗಳನ್ನು ಮಂಜೂರುಮಾಡಲಾಯಿತು.

("ಅಧ್ಯಕ್ಷರ ಆದೇಶದ ಮೇರೆಗೆ ಸಭೆಯು ಮಂಜೂರಾತಿ ನೀಡಿದ ಹೆಚ್ಚುವರಿ ಬೇಡಿಕೆಗಳ ಪಟ್ಟಿಯನ್ನು ಈ ಕೆಳಗೆ ನಮೂದಿಸಲಾಗಿದೆ")

೧ ೧೯೮೯-೯೦ರ ಮಾರ್ಚ್ ೩೧ರ ಅಂತ್ಯದೊಳಗಾಗಿ "ಉದ್ಯಮಗಳು" (ಚಿಕ್ಕಪುಟ್ಟ ಉದ್ಯಮಗಳು ಮತ್ತು ಸಹಕಾರ ಉದ್ಯಮಗಳನ್ನು ಹೊರತಾಗಿ) ಸಂಬಂಧಿಸಿದ ವೆಚ್ಚಗಳ ಬಗ್ಗೆ ಸಂದಾಯ ಮಾಡ ಬೇಕಾಗಿ ಬರುವುದರಿಂದ ರಾಜಸ್ವ ಲೆಕ್ಕದಲ್ಲಿ ೨,೫೦,೦೦,೦೦೦ ಬಂಡವಾಳ ಲೆಕ್ಕದಲ್ಲಿ ೭,೭೮,೫೩,೦೦೦ ರೂಪಾಯಿಗಳಿಗೆ ಮೀರದ ಇನ್ನೂ ಹೆಚ್ಚಿನ ಮೊಬಲಗನ್ನು ಸರ್ಕಾರಕ್ಕೆ ಮಂಜೂರು ಮಾಡುವುದು.

೨ ೧೯೮೯-೯೦ ಮಾರ್ಚ್ ೩೧ರ ಅಂತ್ಯದೊಳಗಾಗಿ "ಸಹಕಾರ ಉದ್ಯಮಗಳು" ಇದಕ್ಕೆ ಸಂಬಂಧಿಸಿದ ವೆಚ್ಚಗಳ ಬಗ್ಗೆ ಸಂದಾಯ ಮಾಡಬೇಕಾಗಿ ಬರುವುದರಿಂದ ಬಂಡವಾಳ ಲೆಕ್ಕದಲ್ಲಿ ೪೫,೦೦,೦೦೦ ರೂಪಾಯಿಗಳಿಗೆ ಮೀರದ ಇನ್ನೂ ಹೆಚ್ಚಿನ ಮೊಬಲಗನ್ನು ಸರ್ಕಾರಕ್ಕೆ ಮಂಜೂರು ಮಾಡಬೇಕೆಂಬುದಾಗಿ ಪ್ರಸ್ತಾಪಿಸಲಾಗಿದೆ.

೩ ೧೯೮೯-೯೦ ಮಾರ್ಚ್ ೩೧ರ ಅಂತ್ಯದೊಳಗಾಗಿ "ಉಚ್ಚ ಶಿಕ್ಷಣಕ್ಕೆ" ಸಂಬಂಧಿಸಿದ ವೆಚ್ಚಗಳ ಬಗ್ಗೆ ಸಂದಾಯ ಮಾಡಬೇಕಾಗಿ ಬರುವುದರಿಂದ ರಾಜಸ್ವ ಲೆಕ್ಕದಲ್ಲಿ ೬೬,೦೦,೦೦೦ ರೂಪಾಯಿಗಳಿಗೆ ಮೀರದ ಇನ್ನೂ ಹೆಚ್ಚಿನ ಮೊಬಲಗನ್ನು ಸರ್ಕಾರಕ್ಕೆ ಮಂಜೂರು ಮಾಡುವುದು.

೪ ೧೯೮೯-೯೦ರ ಮಾರ್ಚ್ ೩೧ರ ಅಂತ್ಯದೊಳಗಾಗಿ "ಮಾಧ್ಯಮಿಕ ಶಿಕ್ಷಣಕ್ಕೆ" ಸಂಬಂಧಿಸಿದ ವೆಚ್ಚಗಳ ಬಗ್ಗೆ ಸಂದಾಯ ಮಾಡಬೇಕಾಗಿ ಬರುವುದರಿಂದ ರಾಜಸ್ವ ಲೆಕ್ಕದಲ್ಲಿ ೩೨,೭೫,೯೦೦ ರೂಪಾಯಿಗಳಿಗೆ ಮೀರದ ಮೊಬಲಗನ್ನು ಸರ್ಕಾರಕ್ಕೆ ಮಂಜೂರು ಮಾಡಬೇಕೆಂಬುದಾಗಿ ಪ್ರಸ್ತಾಪಿಸಲಾಗಿದೆ.

೫ ೧೯೮೯–೯೦ರ ಮಾರ್ಚ್ ೩೧ರ ಅಂತ್ಯದೊಳಗಾಗಿ ''ಸರ್ಕಾರಿ ನೌಕರರಿಗೆ ಸಾಲಗಳು ಮತ್ತು ವಿವಿಧ ಸಾಲಗಳು'' ಇದಕ್ಕೆ ಸಂಬಂಧಿಸಿದ ವೆಚ್ಚಗಳ ಬಗ್ಗೆ ಸಂದಾಯ ಮಾಡಬೇಕಾಗಿ ಬರುವುದರಿಂದ ಬಂಡವಾಳ ಲೆಕ್ಕದಲ್ಲಿ ೨,೦೦,೦೦,೦೦೦ ರೂಪಾಯಿಗಳಿಗೆ ಮೀರದ ಇನ್ನೂ ಹೆಚ್ಚಿನ ಮೊಬಲಗನ್ನು ಸರ್ಕಾರಕ್ಕೆ ಮಂಜೂರು ಮಾಡುವುದು.

೬ ೧೯೮೯–೯೦ರ ಮಾರ್ಚ್ ೩೧ರ ಅಂತ್ಯದೊಳಗಾಗಿ ''ಸಣ್ಣ ಉಳಿತಾಯಗಳು'' ಇದಕ್ಕೆ ಸಂಬಂಧಿಸಿದ ವೆಚ್ಚಗಳ ಬಗ್ಗೆ ಸಂದಾಯ ಮಾಡಬೇಕಾಗಿ ಬರುವುದರಿಂದ ರಾಜಸ್ವ ಲೆಕ್ಕದಲ್ಲಿ ೨,೬೮,೦೦,೦೦೦ ರೂಪಾಯಿಗಳಿಗೆ ಮೀರದ ಇನ್ನೂ ಹೆಚ್ಚಿನ ಮೊಬಲಗನ್ನು ಸರ್ಕಾರಕ್ಕೆ ಮಂಜೂರು ಮಾಡಬೇಕಾಗಿದೆ.

೭ ೧೯೮೯–೯೦ರ ಮಾರ್ಚ್ ೩೧ರ ಅಂತ್ಯದೊಳಗಾಗಿ ''ಇತರ ವಿವಿಧ ಸೇವೆಗಳು'' ಇದಕ್ಕೆ ಸಂಬಂಧಿಸಿದ ವೆಚ್ಚಗಳ ಬಗ್ಗೆ ಸಂದಾಯ ಮಾಡಬೇಕಾಗಿ ಬರುವುದರಿಂದ ರಾಜಸ್ವ ಲೆಕ್ಕದಲ್ಲಿ ೧,೦೦,೦೦೦ ರೂಪಾಯಿಗಳಿಗೆ ಮೀರದ ಇನ್ನೂ ಹೆಚ್ಚಿನ ಮೊಬಲಗನ್ನು ಸರ್ಕಾರಕ್ಕೆ ಮಂಜೂರು ಮಾಡುವುದು.

೮ ೧೯೮೯–೯೦ರ ಮಾರ್ಚ್ ೩೧ರ ಅಂತ್ಯದೊಳಗಾಗಿ ''ರಾಜ್ಯದ ಅಬಕಾರಿಗೆ'' ಸಂಬಂಧಿಸಿದ ವೆಚ್ಚಗಳ ಬಗ್ಗೆ ಸಂದಾಯ ಮಾಡಬೇಕಾಗಿ ಬರುವುದರಿಂದ ರಾಜಸ್ವ ಲೆಕ್ಕದಲ್ಲಿ ೫೨,೦೦,೦೦೦ ರೂಪಾಯಿಗಳಿಗೆ ಮೀರದ ಇನ್ನೂ ಹೆಚ್ಚಿನ ಮೊಬಲಗನ್ನು ಸರ್ಕಾರಕ್ಕೆ ಮಂಜೂರು ಮಾಡುವುದು.

೯ ೧೯೮೯–೯೦ರ ಮಾರ್ಚ್ ೩೧ರ ಅಂತ್ಯದೊಳಗಾಗಿ ''ನಗರಾಭಿವೃದ್ಧಿ ಇತ್ಯಾದಿ'' ಇದಕ್ಕೆ ಸಂಬಂಧಿಸಿದ ವೆಚ್ಚಗಳ ಬಗ್ಗೆ ಸಂದಾಯ ಮಾಡಬೇಕಾಗಿ ಬರುವುದರಿಂದ ರಾಜಸ್ವ ಲೆಕ್ಕದಲ್ಲಿ ೨೦,೨೦,೦೦೦ ಮತ್ತು ಬಂಡವಾಳ ಲೆಕ್ಕದಲ್ಲಿ ೮,೦೦,೦೦,೦೦೦ ರೂಪಾಯಿಗಳಿಗೆ ಮೀರದ ಇನ್ನೂ ಹೆಚ್ಚಿನ ಮೊಬಲಗನ್ನು ಸರ್ಕಾರಕ್ಕೆ ಮಂಜೂರು ಮಾಡುವುದು.

೧೦ ೧೯೮೯–೯೦ರ ಮಾರ್ಚ್ ೩೧ರ ಅಂತ್ಯದೊಳಗಾಗಿ "ಸಾಮಾನ್ಯ ಆಡಳಿತದ ವಿವಿಧ ಅಭಿಯಾಚನೆ''ಗಳಿಗೆ ಸಂಬಂಧಿಸಿದ ವೆಚ್ಚಗಳ ಬಗ್ಗೆ ಸಂದಾಯ ಮಾಡಬೇಕಾಗಿ ಬರುವುದರಿಂದ ರಾಜಸ್ವ ಲೆಕ್ಕದಲ್ಲಿ ೧,೦೦,೦೦೦ ರೂಪಾಯಿಗಳಿಗೆ ಮೀರದ ಇನ್ನೂ ಹೆಚ್ಚಿನ ಮೊಬಲಗನ್ನು ಸರ್ಕಾರಕ್ಕೆ ಮಂಜೂರು ಮಾಡುವುದು.

೧೧ ೧೯೮೯–೯೦ರ ಮಾರ್ಚ್ ೩೧ರ ಅಂತ್ಯದೊಳಗಾಗಿ ''ಪುನರ್ವಸತಿ ಯೋಜನೆ''ಗಳಿಗೆ ಸಂಬಂಧಿಸಿದ ವೆಚ್ಚಗಳ ಬಗ್ಗೆ ಸಂದಾಯಮಾಡಬೇಕಾಗಿ ಬರುವುದರಿಂದ ರಾಜಸ್ವ ಲೆಕ್ಕದಲ್ಲಿ ೫೨,೫೦,೦೦೦ ರೂಪಾಯಿಗಳಿಗೆ ಮೀರದ ಇನ್ನೂ ಹೆಚ್ಚಿನ ಮೊಬಲಗನ್ನು ಸರ್ಕಾರಕ್ಕೆ ಮಂಜೂರು ಮಾಡುವುದು.

೧೨ ೧೯೮೯–೯೦ರ ಮಾರ್ಚ್ ೩೧ರ ಅಂತ್ಯದೊಳಗಾಗಿ ''ಸಹಕಾರ'' (ಕ್ರಮಪಡಿಸಿದ ಮಾರಿಕಟ್ಟೆಗಳ ಹೊರತು), ಇದಕ್ಕೆ ಸಂಬಂಧಿಸಿದ ವೆಚ್ಚಗಳ ಬಗ್ಗೆ ಸಂದಾಯಮಾಡಬೇಕಾಗಿ ಬರುವುದರಿಂದ ಬಂಡವಾಳ ಲೆಕ್ಕದಲ್ಲಿ ೧೬,೨೫,೦೦೦ ರೂಪಾಯಿಗಳಿಗೆ ಮೀರದ ಇನ್ನೂ ಹೆಚ್ಚಿನ ಮೊಬಲಗನ್ನು ಸರ್ಕಾರಕ್ಕೆ ಮಂಜೂರು ಮಾಡುವುದು.

೧೩ ೧೯೮೯–೯೦ರ ಮಾರ್ಚ್ ೩೧ರ ಅಂತ್ಯದೊಳಗಾಗಿ ''ಗ್ರಾಮೀಣ ಅಭಿವೃದ್ಧಿ ಮತ್ತು ಉದ್ಯೋಗ'' ಇದಕ್ಕೆ ಸಂಬಂಧಿಸಿದ ವೆಚ್ಚಗಳ ಬಗ್ಗೆ ಸಂದಾಯ ಮಾಡಬೇಕಾಗಿ ಬರುವುದರಿಂದ ರಾಜಸ್ವ ಲೆಕ್ಕದಲ್ಲಿ ೧,೨೫,೦೩,೦೦೦ ರೂಪಾಯಿಗಳಿಗೆ ಮೀರದ ಇನ್ನೂ ಹೆಚ್ಚಿನ ಮೊಬಲಗನ್ನು ಸರ್ಕಾರಕ್ಕೆ ಮಂಜೂರು ಮಾಡಬೇಕಾಗಿದೆ.

೧೪ ೧೯೮೯–೯೦ರ ಮಾರ್ಚ್ ೩೧ರ ಅಂತ್ಯದೊಳಗಾಗಿ ''ಹರಿಜನ, ಗಿರಿಜನ ಮತ್ತು ಹಿಂದುಳಿದವರ ಕಲ್ಯಾಣಕ್ಕೆ'' ಸಂಬಂಧಿಸಿದ ವೆಚ್ಚಗಳ ಬಗ್ಗೆ ಸಂದಾಯ ಮಾಡಬೇಕಾಗಿ ಬರುವುದರಿಂದ ರಾಜಸ್ವ ಲೆಕ್ಕದಲ್ಲಿ ೩,೮೩,೨೦,೦೦೦ ರೂಪಾಯಿಗಳಿಗೆ ಮೀರದ ಇನ್ನೂ ಹೆಚ್ಚಿನ ಮೊಬಲಗನ್ನು ಸರ್ಕಾರಕ್ಕೆ ಮಂಜೂರು ಮಾಡಬೇಕಾಗಿದೆ.